# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 146
ಸದಸ್ಯರ ಹೆಸರು : ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ).
ಉತ್ತರಿಸುವ ದಿನಾಂಕ : 16.07.2019.
ಉತ್ತರಿಸುವ ಸಚಿವರು : ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು.

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಪ್ರಸ್ತುತ ಬೋಧಕ-ಬೋಧಕೇತರರನ್ನು ಅನುದಾನಕ್ಕೆ ಒಳಪಡಿಸುವ ಪ್ರಕ್ರಿಯೆ ಚಾಲ್ತಿಯಲ್ಲಿದೆಯೇ; ಯಾರ್ಯಾರಿಗೆ ಅನುದಾನ ಕೊಡುವ ಪ್ರಕ್ರಿಯೆ ಚಾಲ್ತಿಯಲ್ಲಿದೆ; (ಸಂಪೂರ್ಣ ವಿವರವಾದ ವಿವರ ನೀಡುವುದು) | ಇಲ್ಲ.<br>ಸರ್ಕಾರದ ಆದೇಶ ಸಂಖ್ಯೆ ಇಡಿ 59 ಪಿಎಂಸಿ 2006, ದಿನಾಂಕ: 06.10.2007 ಮತ್ತು ಇಡಿ 217 ಪಿಎಂಸಿ 2008, ದಿನಾಂಕ: 08.09.2008ರಲ್ಲಿ ದಿನಾಂಕ: 01.06.1987 ರಿಂದ 1994-95ರ ಶೈಕ್ಷಣಿಕ ಸಾಲಿನಲ್ಲಿ ಸಕ್ಷಮ ಪ್ರಾಧಿಕಾರದ ಅನುಮತಿಯೊಂದಿಗೆ ಪ್ರಾರಂಭಿಸಿ ಸತತವಾಗಿ ನಡೆಯುತ್ತಿದ್ದ ಶಾಲಾ/ಕಾಲೇಜುಗಳನ್ನು ಸಹಾಯಾನುದಾನಕ್ಕೆ ಒಳಪಡಿಸಲು ಆಸ್ಪದ ಕಲ್ಪಿಸಲಾಗಿತ್ತು. ಈ ಅವಕಾಶವನ್ನು ಕಲ್ಪಿಸಿ ಸುಮಾರು ಹನ್ನೆರಡು ವರ್ಷಗಳು ಗತಿಸಿದ್ದರೂ ಸಹ ಈ ಅವಕಾಶವನ್ನು ಬಳಸಿಕೊಳ್ಳಲು ಈವರೆವಿಗೂ ಸಂಬಂಧಿಸಿದ ಆಡಳಿತ ಮಂಡಳಿಗಳಿಂದ ಸರ್ಕಾರಕ್ಕೆ ಪ್ರಸ್ತಾವನೆ ಬಾರದೇ ಇರುವುದರಿಂದ, ಅಂತಹ ಅನುದಾನರಹಿತ ಶಾಲಾ/ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸಲು ಸಲ್ಲಿಕೆಯಾಗುವ ಕೋರಿಕೆಗಳನ್ನು ಇನ್ನು ಮುಂದೆ ಪರಿಗಣಿಸಬಾರದೆಂದು ಸರ್ಕಾರದ ಆದೇಶ ಸಂಖ್ಯೆ: ಇಡಿ 18 ಎಸ್‌ಇಪಿ 2018 (ಭಾಗ), ದಿನಾಂಕ: 02.01.2019ರಲ್ಲಿ ಆದೇಶಿಸಲಾಗಿದೆ. ಆದರೆ, ದಿನಾಂಕ; 28.09.2018ರ ಪೂರ್ವದಲ್ಲಿ ಸ್ವೀಕೃತಿಯಾದ ಪ್ರಸ್ತಾವನೆಗಳಲ್ಲಿ ಕೆಲವು ಪ್ರಸ್ತಾವನೆಗಳು ಇಲಾಖೆಯ ವಿವಿಧ ಹಂತಗಳಲ್ಲಿ ಪರಿಶೀಲನೆಯಲ್ಲಿದೆ. |
| (ಆ) | 1995ರ ಮುಂಚೆ ಆರಂಭವಾದ ಹಾಗೂ ನಂತರ ಆರಂಭವಾದ ಶಾಲಾ ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸುವ ಪ್ರಕ್ರಿಯೆ ಚಾಲ್ತಿಯಲ್ಲಿದೆಯೇ; ಅದಕ್ಕಾಗಿ ಇರುವ ನಿಯಮಗಳ ಹಾಗೂ ಸುತ್ತೋಲೆಗಳ ವಿವರಗಳನ್ನು ನೀಡುವುದು; ಖಾಲಿಯಾದ ಹುದ್ದೆಗಳ ಭರ್ತಿಗೆ ಕೈಗೊಂಡಿರುವ ಕ್ರಮಗಳೇನು; ಅವುಗಳ ಕುರಿತು ಇರುವ ನಿಯಮಾವಳಿಗಳೇನು; (ಸುತ್ತೋಲೆಗಳ ಪ್ರತಿಯನ್ನು ವಿವರಗಳೊಂದಿಗೆ ನೀಡುವುದು) | 1995ರ ಮುಂಚೆ ಪ್ರಾರಂಭವಾದ ಶಾಲಾ/ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸಲು ಈ ಮೇಲಿನ ದಿನಾಂಕ: 02.01.2019ರ ಆದೇಶದ ಪ್ರಕಾರ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ.<br>1995ರ ನಂತರ ಪ್ರಾರಂಭವಾದ ಶಾಲಾ/ಕಾಲೇಜುಗಳನ್ನು ಸಹಾಯಾನುದಾನಕ್ಕೆ ಒಳಪಡಿಸಲು ಅಸ್ಪದ ಕಲ್ಪಿಸಿರುವುದಿಲ್ಲ.<br>(ಸಂಬಂಧಪಟ್ಟ ಆದೇಶಗಳನ್ನು ಅನುಬಂಧಿಸಿದೆ)<br>ಅನದಾನಿತ ಪ್ರಾಥಮಿಕ ಶಾಲೆಗಳಲ್ಲಿ ನಿವೃತ್ತಿ ಮತ್ತಿತರೆ ಕಾರಣಗಳಿಂದ ಖಾಲಿಯಾಗುವ ಬೋಧಕ ಹುದ್ದೆಗಳನ್ನು ಹೆಚ್ಚುವರಿ ಸಿಬ್ಬಂದಿಗಳಿಂದ ಮಾತ್ರ ಭರ್ತಿ ಮಾಡಲು ಅವಕಾಶವಿದ್ದು, ನೇರ ನೇಮಕಾತಿ ಮೂಲಕ ಹುದ್ದೆಗೆ ಭರ್ತಿಗೆ ಅವಕಾಶವಿಲ್ಲ. |

| | | |
|---|---|---|
| | | ಬೋಧಕೇತರ ಹುದ್ದೆಗಳ ಭರ್ತಿಗೆ ಅನುದಾನಿತ ಪ್ರಾಥಮಿಕ ಶಾಲಾ ಸಿಬ್ಬಂದಿ ಮಾದರಿ ರಚನೆಯಲ್ಲಿ ಅವಕಾಶವಿರುವುದಿಲ್ಲ.<br>ಅನುದಾನಿತ ಖಾಸಗಿ ಪ್ರೌಢಶಾಲೆಗಳಲ್ಲಿ ನಿವೃತ್ತಿ, ರಾಜೀನಾಮೆ, ಮರಣ ಮತ್ತು ಇತರೆ ಕಾರಣಗಳಿಂದ ದಿನಾಂಕ: 31.12.2015ರವರೆಗೆ ಖಾಲಿಯಾದ ಬೋಧಕ ಹುದ್ದೆಗಳನ್ನು (ವೃತ್ತಿ/ಚಿತ್ರಕಲಾ/ಸಂಗೀತ ಮುಂತಾದ ವಿಶೇಷ ಶಿಕ್ಷಕರನ್ನು ಹೊರತುಪಡಿಸಿ) ಭರ್ತಿ ಮಾಡಿಕೊಳ್ಳಲು ಆರ್ಥಿಕ ಮಿತವ್ಯಯ ಸಡಿಲಿಸಿ ಭರ್ತಿ ಮಾಡಿಕೊಳ್ಳಲು ಸರ್ಕಾರದ ಆದೇಶ ಸಂಖ್ಯೆ: ಇಡಿ 14 ಎಸ್‌ಇಪಿ 2017, ದಿನಾಂಕ: 25.09.2018ರಲ್ಲಿ ಅನುಮತಿ ನೀಡಲಾಗಿದೆ.<br>ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ದಿನಾಂಕ: 31.12.2015ರವರೆಗೆ ವಿವಿಧ ಕಾರಣಗಳಿಂದ ತೆರವಾದ ಉಪನ್ಯಾಸಕರ ಹುದ್ದೆಗಳನ್ನು ಭರ್ತಿಮಾಡಲು ಸರ್ಕಾರದ ಆದೇಶ ಸಂಖ್ಯೆ: ಇಡಿ 144 ಟಿಪಿಯು 2016, ದಿನಾಂಕ: 09.02.2017ರಲ್ಲಿ ಅನುಮತಿ ನೀಡಲಾಗಿದೆ.<br>(ಆದೇಶದ ಪ್ರತಿಗಳನ್ನು ಅನುಬಂಧಿಸಿದೆ) |
| (ಇ) | ಅನುದಾನಿತ ಶಿಕ್ಷಣ ಸಂಸ್ಥೆಗಳ ಕುರಿತು ಸರ್ಕಾರದ ಸ್ಪಷ್ಟ ನಿಲುವೇನು; ಅನುದಾನಿತ ಖಾಸಗಿ ಶಿಕ್ಷಣ ಸಂಸ್ಥೆಗಳ ಕುರಿತು ಸರ್ಕಾರ ಮಲತಾಯಿ ಧೋರಣೆ ತೋರುತ್ತಿದೆ ಎನ್ನುವ ಆರೋಪದ ಬಗ್ಗೆ ಸರ್ಕಾರದ ನಿಲುವೇನು; | ಕರ್ನಾಟಕ ಶಿಕ್ಷಣ ಅಧಿನಿಯಮ 1983 ಹಾಗೂ ಅದರನ್ವಯ ರಚಿತವಾದ ನಿಯಮಗಳ ವ್ಯಾಪ್ತಿಯಲ್ಲಿ ಅನುದಾನಿತ ಶಿಕ್ಷಣ ಸಂಸ್ಥೆಗಳು ಒಳಪಟ್ಟಿರುತ್ತವೆ.<br>ಸರ್ಕಾರಿ ಶಾಲೆಗಳು ಹಾಗೂ ಅನುದಾನಿತ ಶಾಲೆಗಳು ಸಮಾನವಾಗಿದೆ ಎಂದು ಅನುಸರಿಸಲು ಅವಕಾಶವಿರುವುದಿಲ್ಲ. ಆದರೆ, ಚಾಲ್ತಿಯಲ್ಲಿರುವ ನಿಯಮಗಳಂತೆ ಅನುದಾನಿತ ಶಿಕ್ಷಣ ಸಂಸ್ಥೆಗಳಿಗೆ ನೀಡಲು ಒಪ್ಪಿರುವ ಸವಲತ್ತುಗಳನ್ನು ನೀಡುವುದರಲ್ಲಿ ಸರ್ಕಾರವು ಯಾವುದೇ ಮಲತಾಯಿ ಧೋರಣೆ ಅನುಸರಿಸಿರುವುದಿಲ್ಲ. |
| (ಈ) | ಅನುದಾನಿತ ಶಿಕ್ಷಣ ಸಂಸ್ಥೆಗಳಿಗೊಂದು ಕಾನೂನು, ನಿಯಮಗಳು, ಸುತ್ತೋಲೆಗಳು ಹಾಗೂ ಸರ್ಕಾರಿ ಶಾಲಾ - ಕಾಲೇಜುಗಳಿಗೊಂದು ಕಾನೂನು, ನಿಯಮಗಳು, ಸುತ್ತೋಲೆಗಳನ್ನು ಹೊರಡಿಸುವ ಮೂಲಕ ಅನುದಾನಿತ ವ್ಯವಸ್ಥೆಗಳನ್ನು ಬಂದ್ ಮಾಡಬೇಕೆನ್ನುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ? (ಅನುದಾನಿತ ಹಾಗೂ ಸರ್ಕಾರಿ ವ್ಯವಸ್ಥೆಯ ಕಾನೂನು, ನಿಯಮಗಳು, ಸುತ್ತೋಲೆಗಳ ಪಟ್ಟಿಯಲ್ಲಿ ವಿವರವಾದ ವಿವರದೊಂದಿಗೆ ಮಾಹಿತಿ ನೀಡುವುದು) | ರಾಜ್ಯದಲ್ಲಿರುವ ಅನುದಾನಿತ ಶಿಕ್ಷಣ ಸಂಸ್ಥೆಗಳು ಕರ್ನಾಟಕ ಶಿಕ್ಷಣ ಅಧಿನಿಯಮ, 1983 ಹಾಗೂ ಅದರನ್ವಯ ರಚಿಸಲಾದ ನಿಯಮಗಳ ವ್ಯಾಪ್ತಿಗೆ ಒಳಪಡುತ್ತವೆ. ಅದರಂತೆ ಕ್ರಮಕೈಗೊಳ್ಳಲಾಗುತ್ತಿದೆ. |

ಸಂಖ್ಯೆ: ಇಪಿ 68 ಎಸ್‌ಇಎಸ್ 2019)

(ಎಸ್.ಆರ್. ಶ್ರೀನಿವಾಸ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ,

# ಕರ್ನಾಟಕ ಸರ್ಕಾರ

ಸಂಖ್ಯೆ: ಇಡಿ 18 ಎಸ್‌ಇಪಿ 2018(ಭಾಗ)

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು. ದಿನಾಂಕ: 24.05.2019.

## ತಿದ್ದುಪಡಿ/ಸೇರ್ಪಡೆ ಆದೇಶ

ಸರ್ಕಾರದ ಆದೇಶ ಸಂಖ್ಯೆ: ಇಡಿ 18 ಎಸ್‌ಇಪಿ 2018. (ಭಾಗ). ದಿನಾಂಕ: 02.01.2019ರಲ್ಲಿನ ಆದೇಶ ಭಾಗವನ್ನು ಈ ಕೆಳಕಂಡಂತೆ ತಿದ್ದಿ ಓದಿಕೊಳ್ಳತಕ್ಕದ್ದು:-

"ದಿನಾಂಕ : 01.06.1987 ರಿಂದ 1994-95ನೇ ಶೈಕ್ಷಣಿಕ ಸಾಲಿನ ಅವಧಿಯಲ್ಲಿ ಪ್ರಾರಂಭಗೊಂಡು ಅವಿಚ್ಛಿನ್ನವಾಗಿ ನಡೆಯುತ್ತಿದ್ದು, ವೇತನಾನುದಾನವನ್ನು ಕೋರಿ. ಪ್ರಸ್ತುತ ಸರ್ಕಾರದ ಹಂತದಲ್ಲಿ ಬಾಕಿಯಿರುವ 116 ಪ್ರಾಥಮಿಕ ಶಾಲೆಗಳು, 32 ಪ್ರೌಢಶಾಲೆಗಳು ಮತ್ತು 29 ಪದವಿ ಪೂರ್ವ ಕಾಲೇಜುಗಳು ಸೇರಿದಂತೆ ಒಟ್ಟು 177 ಶಾಲಾ/ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸಲು ದಿನಾಂಕ: 28.09.2018ರಂದು ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯ ಸಭೆಯಲ್ಲಿ ಮಂಡಿಸಲಾದ ಮೇಲ್ಕಂಡ ಶಾಲಾ/ಕಾಲೇಜುಗಳನ್ನು ಹೊರತುಪಡಿಸಿ. ಸರ್ಕಾರದ ಆದೇಶ ಸಂಖ್ಯೆ: ಇಡಿ 59 ಪಿಎಂಸಿ 2006, ದಿನಾಂಕ: 06.10.2007 ಮತ್ತು ಸರ್ಕಾರದ ಆದೇಶ ಸಂಖ್ಯೆ: ಇಡಿ 217 ಪಿಎಂಸಿ 2008. ದಿನಾಂಕ: 08.09.2008ರಲ್ಲಿ ಕಲ್ಪಿಸಲಾಗಿರುವ ಅವಕಾಶವನ್ನು ಬಳಸಿಕೊಳ್ಳಲು ಈವರೆವಿಗೂ ಸಂಬಂಧಿಸಿದ ಆಡಳಿತ ಮಂಡಳಿಗಳಿಂದ ಸರ್ಕಾರಕ್ಕೆ ಪ್ರಸ್ತಾವನೆ ಬಾರದೆ ಇರುವುದರಿಂದ. ಅಂತಹ ಅನುದಾನರಹಿತ ಪ್ರಾಥಮಿಕ. ಪ್ರೌಢಶಾಲೆ ಹಾಗೂ ಪದವಿಪೂರ್ವ ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸಲು ಸಲ್ಲಿಕೆಯಾಗುವ ಕೋರಿಕೆ/ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದಲ್ಲ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆ/ಪದವಿಪೂರ್ವ ಶಿಕ್ಷಣ ಇಲಾಖೆಯ ಅಧೀನ ಕಛೇರಿಗಳಲ್ಲಿಯೂ ಸಹ ಅಂತಹ ಪ್ರಸ್ತಾವನೆ/ಕೋರಿಕೆಗಳನ್ನು ಪರಿಗಣಿಸಬಾರದೆಂದು ಈ ಮೂಲಕ ಆದೇಶಿಸಿದೆ."

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ.

Rajyashree V T 24/5

(ವಿ. ಟಿ. ರಾಜ್ಯಶ್ರೀ)
ಸರ್ಕಾರದ ಅಧೀನ ಕಾರ್ಯದರ್ಶಿ.
ಶಿಕ್ಷಣ ಇಲಾಖೆ (ಪ್ರೌಢ ಶಿಕ್ಷಣ).

ಇವರಿಗೆ :-

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
4. ಆಯುಕ್ತರು. ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
5. ನಿರ್ದೇಶಕರು. ಪದವಿಪೂರ್ವ ಶಿಕ್ಷಣ, ಮಲ್ಲೇಶ್ವರಂ. ಬೆಂಗಳೂರು.
6. ಅಪರ ಆಯುಕ್ತರು. ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ.
7. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ.
8. ಸಂಬಂಧಪಟ್ಟ ಜಿಲ್ಲಾ ಉಪ ನಿರ್ದೇಶಕರು. ಸಾರ್ವಜನಿಕ ಶಿಕ್ಷಣ ಇಲಾಖೆ (ಆಯುಕ್ತರು. ಸಾರ್ವಜನಿಕ ಶಿಕ್ಷಣ ಇಲಾಖೆ. ಬೆಂಗಳೂರು. ಇವರ ಮುಖಾಂತರ).
9. ಸಂಬಂಧಪಟ್ಟ ಜಿಲ್ಲಾ ಉಪ ನಿರ್ದೇಶಕರು. ಪದವಿಪೂರ್ವ ಶಿಕ್ಷಣ ಇಲಾಖೆ. (ನಿರ್ದೇಶಕರು (ಪದವಿಪೂರ್ವ ಶಿಕ್ಷಣ). ಬೆಂಗಳೂರು, ಇವರ ಮುಖಾಂತರ).
10. ಸರ್ಕಾರದ ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಪ್ರಾಥಮಿಕ/ಪ್ರೌಢ ಶಿಕ್ಷಣ/ಪದವಿಪೂರ್ವ ಶಿಕ್ಷಣ).
11. ಸಂಬಂಧಪಟ್ಟ ತಾಲ್ಲೂಕುಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ (ಆಯುಕ್ತರು. ಸಾರ್ವಜನಿಕ ಶಿಕ್ಷಣ ಇಲಾಖೆ. ಬೆಂಗಳೂರು. ಇವರ ಮುಖಾಂತರ).
12. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ದಿನಾಂಕ : 01.06.1987 ರಿಂದ 1994-95ನೇ ಶೈಕ್ಷಣಿಕ ವರ್ಷದ ಅವಧಿಯಲ್ಲಿ ಪ್ರಾರಂಭವಾದ ಅನುದಾನರಹಿತ ಶಾಲಾ/ಕಾಲೇಜುಗಳನ್ನು ವೇತನಾನುದಾನಕ್ಕೆ
೧ ಒಳಪಡಿಸಲು ಸಲ್ಲಿಸುವ ಕೋರಿಕೆ/ಪ್ರಸ್ತಾವನೆಗಳ ಕುರಿತು.

ಓದಲಾಗಿದೆ :-

1. ಸರ್ಕಾರದ ಆದೇಶ ಸಂಖ್ಯೆ : ಇಡಿ 59 ಪಿಎಂಸಿ 2006. ದಿನಾಂಕ : 06/10/2007.
2. ಸರ್ಕಾರದ ಆದೇಶ ಸಂಖ್ಯೆ : ಇಡಿ 217 ಪಿಎಂಸಿ 2008. ದಿನಾಂಕ : 08/09/2008

ಪ್ರಸ್ತಾವನೆ :-

ಮೇಲೆ ಕ್ರಮಾಂಕ (1)ರಲ್ಲಿ ಓದಲಾದ ಆದೇಶದಲ್ಲಿ ದಿನಾಂಕ : 01.06.1987ರಿಂದ 1992-93ನೇ ಸಾಲಿನಲ್ಲಿ ಪ್ರಾರಂಭಗೊಂಡ ಹಾಗೂ ಮೇಲೆ ಕ್ರಮಾಂಕ (2)ರಲ್ಲಿ ಓದಲಾದ ಆದೇಶದಲ್ಲಿ 1993-94 ಮತ್ತು 1994-95ನೇ ಸಾಲಿನಲ್ಲಿ ಪ್ರಾರಂಭಗೊಂಡು ಸತತವಾಗಿ ನಡೆಯುತ್ತಿರುವ ಹಾಗೂ ನಿಗದಿತ ಮಾನದಂಡಗಳನ್ನು ಪೂರೈಸಿರುವ ಪ್ರಾಥಮಿಕ, ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸಲು ಅವಕಾಶ ಕಲ್ಪಿಸಲಾಗಿದೆ

ಈ ಅವಕಾಶದನ್ವಯ ಅನುದಾನ ಕೋರಿರುವ ಆಡಳಿತ ಮಂಡಳಿಗಳಲ್ಲಿನ ಶಾಲಾ/ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸಲಾಗಿದೆ. ಈ ಅವಕಾಶವನ್ನು ಕಲ್ಪಿಸಿ ಈಗಾಗಲೇ 11 ವರ್ಷಗಳು ಗತಿಸಿದ್ದರೂ ಸಹ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯಲ್ಲಿ ಸ್ವೀಕೃತವಾಗಿದ್ದ 116 ಪ್ರಾಥಮಿಕ ಶಾಲೆಗಳು, 32 ಪ್ರೌಢಶಾಲೆಗಳು ಮತ್ತು 29 ಪದವಿಪೂರ್ವ ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸುವ ಪ್ರಸ್ತಾವನೆಗಳ ಕುರಿತು, ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ದಿನಾಂಕ : 28.09.2018 ರಂದು ನಡೆದ ಸಭೆಯ ನಿರ್ಣಯ ಈ ಕೆಳಕಂಡಂತಿದೆ:-

1. "1987 ರಿಂದ 1994-95ನೇ ಸಾಲಿನ ಅವಧಿಯಲ್ಲಿ ಪ್ರಾರಂಭಗೊಂಡು ಅವಿಚ್ಛಿನ್ನವಾಗಿ ನಡೆಯುತ್ತಿದ್ದು, ವೇತನಾನುದಾನವನ್ನು ಕೋರಿ, ಪ್ರಸ್ತುತ ಸರ್ಕಾರದ ಹಂತದಲ್ಲಿ ಬಾಕಿ ಇರುವ 116-ಪ್ರಾಥಮಿಕ ಶಾಲೆಗಳು, 32-ಪ್ರೌಢಶಾಲೆಗಳು ಮತ್ತು 29-ಪದವಿಪೂರ್ವ ಕಾಲೇಜುಗಳು ಸೇರಿದಂತೆ ಒಟ್ಟು 177 ಶಾಲಾ/ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸಲು ಹಾಗೂ ಈಗಾಗಲೇ ಅನುದಾನಕ್ಕೆ ಒಳಪಡಿಸಿರುವ ಪದವಿಪೂರ್ವ ಶಿಕ್ಷಣ ಕಾಲೇಜುಗಳಲ್ಲಿ 120 ವಿದ್ಯಾರ್ಥಿಗಳ ಸಂಖ್ಯಾಬಲ ಇರುವ 178 ದೈಹಿಕ ಶಿಕ್ಷಣ ಉಪನ್ಯಾಸಕರ ಹುದ್ದೆಗಳನ್ನು ವೇತನಾನುದಾನಕ್ಕೆ ಒಳಪಡಿಸಲು ಶಿಕ್ಷಣ ಇಲಾಖೆಯು ಆರ್ಥಿಕ ಇಲಾಖೆಗೆ ಸಲ್ಲಿಸಿರುವ ಪ್ರಸ್ತಾವನೆಗಳನ್ನು ಅನುಮೋದಿಸಿ ವೇತನಾನುದಾನಕ್ಕೆ ಒಳಪಡಿಸಲು ಮತ್ತು ಮೇಲ್ಕಂಡ ಸಾಲಿನ ಅವಧಿಯಲ್ಲಿ ಪ್ರಾರಂಭಗೊಂಡಿರುವ ಶಾಲಾ ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸಲು 2007ರಲ್ಲಿ ಅವಕಾಶ ಕಲ್ಪಿಸಿ ಈಗಾಗಲೇ 11 ವರ್ಷಗಳು ಗತಿಸಿದ್ದರೂ ಸಹ ಈವರೆವಿಗೂ ಉಳಿದ ಶಾಲೆಗಳ ಪ್ರಸ್ತಾವನೆಗಳು ಬಾರದೇ ಇದ್ದು ಅವುಗಳನ್ನು ಇನ್ನು ಮುಂದೆ ಪರಿಗಣಿಸಲಾಗುವುದಿಲ್ಲವೆಂದು ಸಭೆಯು ತೀರ್ಮಾನಿಸಿತು.
2. ಶಿಕ್ಷಣ ಇಲಾಖೆಯ ಅನುದಾನ ನೀತಿ ಸಂಹಿತ ಪ್ರಕಾರ "ಪ್ರಾಥಮಿಕ" ಶಾಲೆಗಳಿಗೆ ಮಕ್ಕಳ ಸಂಖ್ಯೆಗೆ ಅನುಗುಣವಾಗಿ 6 ಶಿಕ್ಷಕರು, 01 ದೈಹಿಕ ಶಿಕ್ಷಣ ಶಿಕ್ಷಕರು, "ಪ್ರೌಢಶಾಲೆಗಳಿಗೆ" 08 ಬೋಧಕ, 01 ಬೋಧಕೇತರ (ದ್ವಿದಸ) ಹುದ್ದೆಗಳನ್ನು ಹಾಗೆಯೇ "ಪದವಿ ಪೂರ್ವ" ಕಾಲೇಜುಗಳ 6 ಉಪನ್ಯಾಸಕ, 01 ದೈಹಿಕ ಶಿಕ್ಷಣ ಉಪನ್ಯಾಸಕ ಹಾಗೂ 01 ಬೋಧಕೇತರ (ದ್ವಿದಸ) ಹುದ್ದೆಗಳಿಗೆ ಆರ್ಥಿಕ ಇಲಾಖೆಯು ತಾತ್ವಿಕ ಅನುಮೋದನೆ ನೀಡಿದ ನಂತರ ಪ್ರತಿಯೊಂದು ಹುದ್ದೆಗಳನ್ನು ತುಂಬಲು ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಕಳುಹಿಸುವ ಅವಶ್ಯವಿಲ್ಲ ಎಂದು ನಿರ್ಧರಿಸಲಾಯಿತು.

ಮೇಲಿನ ನಿರ್ಣಯದಂತೆ ಈಗಾಗಲೇ ವೇತನಾನುದಾನಕ್ಕೆ ಒಳಪಡಿಸಲು ಅವಕಾಶ ಕಲ್ಪಿಸಿ ಸುಮಾರು ಹನ್ನೊಂದು ವರ್ಷಗಳು ಗತಿಸಿದ್ದರೂ ಸಹ ಇಂತಹ ಅವಕಾಶವನ್ನು ಬಳಸಿಕೊಳ್ಳುವಲ್ಲಿ ಅನುದಾನರಹಿತ ಶಾಲೆಗಳ ಆಡಳಿತ ಮಂಡಳಿಗಳು ಆಸಕ್ತಿ ವಹಿಸದೇ ಇರುವುದನ್ನು ಗಮನಿಸಿ ಈ ಅವಕಾಶವನ್ನು ಮುಂದುವರೆಸುವುದು ಅವಶ್ಯಕವಿಲ್ಲವೆಂದು ಸರ್ಕಾರವು ಮನಗಂಡಿರುವುದರಿಂದ ದಿನಾಂಕ 28.09.2018ರ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ

ಸಭೆಯಲ್ಲಿ ಮಂಡಿಸಿದ ದಿನಾಂಕ: 01.06.1987 ರಿಂದ 1994-95ನೇ ಅವಧಿಯಲ್ಲಿ ಪ್ರಾರಂಭಗೊಂಡಿರುವ ಶಾಲಾ ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸಲು ಆಡಳಿತ ಮಂಡಳಿಗಳು ಸಲ್ಲಿಸುವ ಕೋರಿಕೆಗಳನ್ನು ಹೊರತುಪಡಿಸಿ ಮತ್ತು ಮುಂದೆ ಯಾವ ಕೋರಿಕೆ/ಪ್ರಸ್ತಾವನೆಗಳನ್ನು ಪರಿಗಣಿಸದಿರಲು ನಿರ್ಣಯಿಸಿ ಈ ಕೆಳಕಂಡ ಆದೇಶ.

<u>ಸರ್ಕಾರದ ಆದೇಶ ಸಂಖ್ಯೆ: ಇಪಿ 18 ಎಸ್‌ಇಪಿ 2018 (ಭಾಗ),</u>
<u>ಬೆಂಗಳೂರು, ದಿನಾಂಕ: 02ನೇ ಜನವರಿ, 2019.</u>

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ದಿನಾಂಕ: 01.06.1987 ರಿಂದ 1994-95ನೇ ಅವಧಿಯಲ್ಲಿ ಪ್ರಾರಂಭವಾದ ಅನುದಾನರಹಿತ ಪ್ರಾಥಮಿಕ, ಪ್ರೌಢಶಾಲೆ ಹಾಗೂ ಪದವಿಪೂರ್ವ ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸಲು ಸಲ್ಲಿಕೆಯಾಗುವ ಕೋರಿಕೆ/ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದಲ್ಲ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆ/ಪದವಿಪೂರ್ವ ಶಿಕ್ಷಣ ಇಲಾಖೆಯ ಅಧೀನ ಕಛೇರಿಗಳಲ್ಲಿಯೂ ಸಹ ಅಂತಹ ಪ್ರಸ್ತಾವನೆ/ಕೋರಿಕೆಗಳನ್ನು ಪರಿಗಣಿಸಬಾರದೆಂದು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

Rajyashree V T

(ವಿ. ಟಿ. ರಾಜ್ಯಶ್ರೀ)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಪ್ರೌಢ ಶಿಕ್ಷಣ).

<u>ಇವರಿಗೆ</u> :-

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
4. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
5. ನಿರ್ದೇಶಕರು, ಪದವಿಪೂರ್ವ ಶಿಕ್ಷಣ, ಮಲ್ಲೇಶ್ವರಂ, ಬೆಂಗಳೂರು.
6. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ.
7. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ.
8. ಸಂಬಂಧಪಟ್ಟ ಜಿಲ್ಲಾ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ (ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರ ಮುಖಾಂತರ).
9. ಸಂಬಂಧಪಟ್ಟ ಜಿಲ್ಲಾ ಉಪ ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, (ನಿರ್ದೇಶಕರು (ಪದವಿಪೂರ್ವ ಶಿಕ್ಷಣ), ಬೆಂಗಳೂರು, ಇವರ ಮುಖಾಂತರ).
10. ಸರ್ಕಾರದ ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಪ್ರಾಥಮಿಕ/ಪ್ರೌಢ ಶಿಕ್ಷಣ/ಪದವಿಪೂರ್ವ ಶಿಕ್ಷಣ).
11. ಸಂಬಂಧಪಟ್ಟ ತಾಲ್ಲೂಕುಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ (ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರ ಮುಖಾಂತರ).
12. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿ ನಿವೃತ್ತಿ, ರಾಜೀನಾಮೆ, ಮರಣ, ಸೂಕ್ತ ಪ್ರಾಧಿಕಾರದ ಅನುಮೋದನೆ ಪಡೆದು ಬಡ್ತಿ ಹೊಂದಿರುವ ಹಾಗೂ ಇತರೆ ಕಾರಣಗಳಿಂದ ಖಾಲಿ ಇರುವ ಬೋಧಕ ಹುದ್ದೆಗಳನ್ನು ಭರ್ತಿಮಾಡಲು ಅನುಮತಿ ನೀಡುವ ಕುರಿತು.

*****

ಓದಲಾಗಿದೆ :-

1. ಸರ್ಕಾರದ ಆದೇಶ ಸಂಖ್ಯೆ: ಇಡಿ 14 ಎಸ್‌ಇಪಿ 2017, ದಿನಾಂಕ: 29.06.2017
2. ಸರ್ಕಾರದ ಆದೇಶ ಸಂಖ್ಯೆ: ಇಡಿ 14 ಎಸ್‌ಇಪಿ 2017, ದಿನಾಂಕ: 25.09.2018

*****

ಪ್ರಸ್ತಾವನೆ:-

ಮೇಲೆ ಕ್ರಮಾಂಕ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಅನುದಾನಿತ ಖಾಸಗಿ ಪ್ರೌಢಶಾಲೆಗಳಲ್ಲಿ ನಿವೃತ್ತಿ, ರಾಜೀನಾಮೆ, ಮರಣದಿಂದ ಖಾಲಿಯಾದ ಹುದ್ದೆಗಳನ್ನು ಹಾಗೂ ಸೂಕ್ತ ಪ್ರಾಧಿಕಾರದ ಅನುಮೋದನೆ ಪಡೆದು ಬಡ್ತಿ ಹೊಂದಿರುವ ಹಾಗೂ ಇತರೆ ಕಾರಣಗಳಿಂದ ದಿನಾಂಕ: 31.12.2012ರವರೆಗೆ ಖಾಲಿಯಾದ ಹುದ್ದೆಗಳನ್ನು ಹೆಚ್ಚುವರಿ ಪ್ರಕ್ರಿಯೆಯಲ್ಲಿ ಬಳಸಿಕೊಂಡ ನಂತರ ಬಾಕಿ ಉಳಿದ ಬೋಧಕ ಹುದ್ದೆಗಳನ್ನು ಹಾಗೂ ದಿನಾಂಕ: 01.01.2013 ರಿಂದ 31.12.2014ರವರೆಗೆ ಮತ್ತು ಮೇಲೆ ಕ್ರಮಾಂಕ (2)ರಲ್ಲಿ ಓದಲಾದ ಆದೇಶದಲ್ಲಿ ದಿನಾಂಕ: 01.01.2015 ರಿಂದ 31.12.2015ರವರೆಗೆ ಖಾಲಿಯಾದ ಬೋಧಕ ಹುದ್ದೆಗಳನ್ನು ಹೆಚ್ಚುವರಿ ಪ್ರಕ್ರಿಯೆಯಲ್ಲಿ ಬಳಸಿಕೊಂಡ ನಂತರ ಬಾಕಿ ಉಳಿದ ಬೋಧಕ ಹುದ್ದೆಗಳನ್ನು (ವೃತ್ತಿ/ಚಿತ್ರಕಲಾ/ಸಂಗೀತ ಮುಂತಾದ ವಿಶೇಷ ಶಿಕ್ಷಕರನ್ನು ಹೊರತುಪಡಿಸಿ) ಭರ್ತಿ ಮಾಡಿಕೊಳ್ಳಲು ಕೆಲವು ಷರತ್ತುಗಳಿಗೊಳಪಟ್ಟು ಆರ್ಥಿಕ ಮಿತವ್ಯಯ ಸಡಿಲಿಸಿ ಅನುಮತಿ ನೀಡಲಾಗಿದೆ. ಸದರಿ ಷರತ್ತುಗಳಲ್ಲಿನ ಕ್ರಮ ಸಂಖ್ಯೆ (4)ರಲ್ಲಿ ಸಂಬಂಧಿಸಿದ ಅನುದಾನಿತ ಶಾಲೆಯ ಎಸ್.ಎಸ್.ಎಲ್.ಸಿ ಫಲಿತಾಂಶವು (Regular Candidates only) ಕಳೆದ 5 ಶೈಕ್ಷಣಿಕ ವರ್ಷಗಳ ಜಿಲ್ಲಾ ಸರಾಸರಿ ಫಲಿತಾಂಶಕ್ಕಿಂತ ಉತ್ತಮವಾಗಿರಬೇಕು ಎಂಬ ಷರತ್ತನ್ನು ಇರುತ್ತದೆ.

ಮಾನ್ಯ ಸಭಾಪತಿಗಳು, ವಿಧಾನ ಪರಿಷತ್ತು ಮತ್ತು ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಉಪಸ್ಥಿತಿಯಲ್ಲಿ ದಿನಾಂಕ: 01.09.2018ರಂದು ನಡೆದ ಸಭೆಯಲ್ಲಿ ಅನುದಾನಿತ ಪ್ರೌಢಶಾಲೆಗಳಲ್ಲಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ವಿಧಿಸಿರುವ ಫಲಿತಾಂಶದ ಷರತ್ತನ್ನು ಸಡಿಲಿಸಿ ಹುದ್ದೆ ಭರ್ತಿಯಾದ ಮೂರು ವರ್ಷದ ನಂತರ ಫಲಿತಾಂಶ ಸುಧಾರಣೆಯಾಗಿದಿದ್ದಲ್ಲಿ ಅನುದಾನ ತಡೆಹಿಡಿಯುವುದಕ್ಕೆ ಕ್ರಮ ಕೈಗೊಳ್ಳುವಂತೆ ಚರ್ಚಿಸಲಾಗಿರುತ್ತದೆ. ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ವಿಧಿಸಲಾಗಿರುವ ಫಲಿತಾಂಶದ ಷರತ್ತನ್ನು ಸಡಿಲಿಸುವಂತೆ ವಿವಿಧ ಶಿಕ್ಷಣ ಸಂಸ್ಥೆಗಳು, ಶಿಕ್ಷಣ ಕ್ಷೇತ್ರವನ್ನು ಪ್ರತಿನಿಧಿಸುವ ಮಾನ್ಯ ವಿಧಾನ ಪರಿಷತ್ತು ಸದಸ್ಯರುಗಳಿಂದಲೂ ಬೇಡಿಕೆ ಇರುತ್ತದೆ.

ಮಾನ್ಯ ಮುಖ್ಯಮಂತ್ರಿಗಳ ನಿರ್ದೇಶನದ ಮೇರೆಗೆ ಕರ್ನಾಟಕ ರಾಜ್ಯ ಅನುದಾನಿತ ಶಾಲಾ ಕಾಲೇಜು ಸಂಘ, ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ, ರಾಜ್ಯ ಪ್ರೌಢಶಾಲಾ ಸಹ ಶಿಕ್ಷಕರ ಸಂಘ ಹಾಗೂ ರಾಜ್ಯ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘದ ಬೇಡಿಕೆಗಳ ಕುರಿತು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ:29.01.2019ರಂದು ಜರುಗಿದ ಸಭೆಯಲ್ಲಿ ಮಾನ್ಯ ಮುಖ್ಯಮಂತ್ರಿಯವರ ಕಾರ್ಯದರ್ಶಿಯವರು ಸಹ ಹಾಜರಿದ್ದು, ಅಂದು ಚರ್ಚಿಸಿ ನೀಡಿದ ಸಲಹೆಗಳನ್ನು ಪರಿಗಣಿಸಿದ.

ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿ ನಿವೃತ್ತಿ, ರಾಜೀನಾಮೆ, ಮರಣ, ಸೂಕ್ತ ಪ್ರಾಧಿಕಾರದ ಅನುಮೋದನೆ ಪಡೆದು ಬಡ್ತಿ ಹೊಂದಿರುವ ಹಾಗೂ ಇತರೆ ಕಾರಣಗಳಿಂದ ಖಾಲಿ ಇರುವ ಅನುದಾನಿತ ಬೋಧಕ ಹುದ್ದೆಗಳನ್ನು ತುಂಬುವ ಸಂಬಂಧದಲ್ಲಿ ಆಗಿರುವ ಪ್ರಗತಿಯನ್ನು ಪರಿಶೀಲಿಸಲಾಗಿ ದಿನಾಂಕ: 31.12.2015ರವರೆಗೆ ವಿವಿಧ ಕಾರಣಗಳಿಂದ ಖಾಲಿಯಾದ ಒಟ್ಟು 3633 ಬೋಧಕ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ನೀಡಲಾಗಿದೆ. ಅವುಗಳ ಪೈಕಿ ಸರ್ಕಾರವು ವಿಧಿಸಿದ ಷರತ್ತಿಗನುಗುಣವಾಗಿ 781 ಹುದ್ದೆಗಳನ್ನು ಭರ್ತಿ ಮಾಡಲಾಗಿರುತ್ತದೆ. ಸರ್ಕಾರವು ವಿಧಿಸಿರುವ ಷರತ್ತುಗಳಲ್ಲಿ ಒಂದಾದ ಶಾಲೆಯ ಎಸ್.ಎಸ್.ಎಲ್.ಸಿ ಫಲಿತಾಂಶವು ಜಿಲ್ಲಾ ಸರಾಸರಿ ಫಲಿತಾಂಶಕ್ಕೆ ಸಮನಾಗಿ ಅಥವಾ ಹೆಚ್ಚಾಗಿರಬೇಕೆಂಬ ಷರತ್ತನ್ನು ಪೂರೈಸದ ಕಾರಣದಿಂದಾಗಿ ಬಹುತೇಕ ಖಾಲಿ ಹುದ್ದೆಗಳು ಭರ್ತಿಯಾಗದೆ ಉಳಿದಿವೆ. ಇದರಿಂದಾಗಿ ಸರ್ಕಾರವು ಅನುಮತಿ ನೀಡಿದ ಹುದ್ದೆಗಳಲ್ಲಿ ಶೇ.75ಕ್ಕಿಂತ ಹೆಚ್ಚಿನ ಹುದ್ದೆಗಳನ್ನು ಭರ್ತಿ ಮಾಡಲು ಸಾಧ್ಯವಾಗಿರುವುದಿಲ್ಲ. ಸದರಿ ಹುದ್ದೆಗಳನ್ನು ಭರ್ತಿ ಮಾಡದಿದ್ದಲ್ಲಿ, ಸದರಿ ಶಾಲೆಗಳ ಫಲಿತಾಂಶದ ಮೇಲೆ ಇನ್ನೂ ಹೆಚ್ಚಿನ ಋಣಾತ್ಮಕ ಪರಿಣಾಮವಾಗುವ ಸಂಭವವಿದೆ.

ಬೋಧನಾ ಗುಣಮಟ್ಟವನ್ನು ಕಾಪಾಡಲು ಸಹಾಯಕವಾಗುವಂತೆ ಅನುದಾನಿತ ಪ್ರೌಢಶಾಲಾ ಶಿಕ್ಷಕರ ವಿಷಯವಾರು ಫಲಿತಾಂಶದ ಶೇಕಡವಾರು ಫಲಿತಾಂಶದಲ್ಲಿ ಅಗತ್ಯ ಸುಧಾರಣಾ ಕ್ರಮಗಳನ್ನು ಕೈಗೊಳ್ಳಬಹುದಾದ ಷರತ್ತಿಗೆ ಒಳಪಟ್ಟು ಶಾಲೆಯ ಎಸ್.ಎಸ್.ಎಲ್.ಸಿ ಫಲಿತಾಂಶವು ಜಿಲ್ಲಾ ಸರಾಸರಿ ಫಲಿತಾಂಶಕ್ಕೆ ಸಮನಾಗಿ ಅಥವಾ ಹೆಚ್ಚಾಗಿರಬೇಕೆಂಬ ಎಂಬ ಷರತ್ತನ್ನು ಸಡಿಲಿಸಲು ನಿರ್ಣಯಿಸಲಾಗಿದೆ

ಮೇಲ್ಕಂಡ ವಾಸ್ತವಾಂಶಗಳ ಹಿನ್ನೆಲೆಯಲ್ಲಿ, ಪ್ರಸ್ತುತ ಅನುದಾನಿತ ಪ್ರೌಢಶಾಲೆಗಳಲ್ಲಿ ದಿನಾಂಕ: 31.12.2015ರವರೆಗೆ ವಿವಿಧ ಕಾರಣಗಳಿಂದ ತೆರವಾಗಿರುವ ಹುದ್ದೆಗಳನ್ನು ಭರ್ತಿ ಮಾಡಲು ಪ್ರಸ್ತುತ ವಿಧಿಸಲಾಗಿರುವ ಶಾಲೆಯ ಎಸ್.ಎಸ್.ಎಲ್.ಸಿ ಫಲಿತಾಂಶವು ಜಿಲ್ಲಾ ಸರಾಸರಿ ಫಲಿತಾಂಶಕ್ಕೆ ಸಮನಾಗಿ ಅಥವಾ ಹೆಚ್ಚಾಗಿರಬೇಕೆಂಬ ಷರತ್ತನ್ನು ಸಡಿಲಗೊಳಿಸುವ ಬಗ್ಗೆ ನಿರ್ಣಯಿಸಿ ಈ ಕೆಳಕಂಡಂತೆ ಆದೇಶಿಸಲಾಗಿದೆ

<u>ಸರ್ಕಾರಿ ಆದೇಶ ಸಂಖ್ಯೆ : ಇಡಿ 14 ಎಸ್‌ಇಪಿ 2017,</u>

<u>ಬೆಂಗಳೂರು, ದಿನಾಂಕ : 06ನೇ ಮಾರ್ಚ್, 2019.</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ವಾಸ್ತವಾಂಶ ಹಾಗೂ ಸಕಾರಣಗಳ ಹಿನ್ನೆಲೆಯಲ್ಲಿ, ಅನುದಾನಿತ ಪ್ರೌಢಶಾಲೆಗಳಲ್ಲಿ ವಿವಿಧ ಕಾರಣಗಳಿಂದ ದಿನಾಂಕ: 31.12.2015ರವರೆಗೆ ಖಾಲಿಯಾದ ಬೋಧಕ ಹಾಗೂ ದೈಹಿಕ ಶಿಕ್ಷಣ ಶಿಕ್ಷಕರ (ವೃತ್ತಿ/ಚಿತ್ರಕಲಾ/ಸಂಗೀತ ಮುಂತಾದ ವಿಶೇಷ ಶಿಕ್ಷಕರನ್ನು ಹೊರತುಪಡಿಸಿ) ಹುದ್ದೆಗಳನ್ನು ಭರ್ತಿಮಾಡಲು ಶಾಲೆಯ ಎಸ್.ಎಸ್.ಎಲ್.ಸಿ ಫಲಿತಾಂಶವು ಜಿಲ್ಲಾ ಸರಾಸರಿ ಫಲಿತಾಂಶಕ್ಕೆ ಸಮನಾಗಿ ಅಥವಾ ಹೆಚ್ಚಾಗಿರಬೇಕೆಂಬ ಷರತ್ತನ್ನು ಸಡಿಲಗೊಳಿಸಿ, ಈ ಕೆಳಕಂಡ ಷರತ್ತುಗಳನ್ನು ವಿಧಿಸಿ ಸದರಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸಕ್ಷಮ ಪ್ರಾಧಿಕಾರಿಗಳಿಗೆ ಅನುಮತಿ ನೀಡಿ ಆದೇಶಿಸಿದೆ

1) ಈಗಾಗಲೇ ಅನುದಾನಕ್ಕೊಳಪಟ್ಟಿರುವ ಶಾಲೆಯ ಒಟ್ಟಾರೆ ಫಲಿತಾಂಶದ ಬದಲು ವಿಷಯವಾರು ಫಲಿತಾಂಶವನ್ನು ಪರಿಗಣಿಸಿ ಶೇ.60 ಕ್ಕಿಂತ ಕಡಿಮೆ ಫಲಿತಾಂಶವನ್ನು ಪಡೆದಿರುವ ವಿಷಯ ಶಿಕ್ಷಕರನ್ನು ಗುರುತಿಸಿ ಅಂತಹವರ ವಾರ್ಷಿಕ ವೇತನ ಬಡ್ತಿಯನ್ನು ತಡೆಹಿಡಿಯುವುದು;
2) ಅನುದಾನ ಪಡೆಯುತ್ತಿರುವ ವಿಷಯ ಶಿಕ್ಷಕರು ನಿರಂತರ ಮೂರು ವರ್ಷಗಳಲ್ಲಿ ಶೇ.60ಕ್ಕಿಂತ ಕಡಿಮೆ ಫಲಿತಾಂಶ ನೀಡಿದಲ್ಲಿ, ಅಂತಹ ವಿಷಯ ಶಿಕ್ಷಕರ ವೇತನಾನುದಾನವನ್ನು ತಡೆಹಿಡಿಯುವುದು;
3) ಒಂದು ಅನುದಾನಿತ ಪ್ರೌಢಶಾಲೆಯು ಸತತ ಐದು ವರ್ಷಗಳಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳಲ್ಲಿ ಐದು ವರ್ಷಗಳು ನಿರಂತರವಾಗಿ ಕನಿಷ್ಠ ಶೇ.50 ವಿದ್ಯಾರ್ಥಿಗಳು ಉತ್ತೀರ್ಣರಾಗದಿದ್ದಲ್ಲಿ ಶಾಲೆಗೆ ನೀಡಲಾಗುತ್ತಿರುವ ವೇತನಾನುದಾನವನ್ನು ತಡೆಹಿಡಿಯುವುದು

4) ಖಾಲಿ ಹುದ್ದೆಗೆ ಎದುರಾಗಿ ಅನುದಾನಕ್ಕೊಳಪಡುವ ವಿಷಯ ಶಿಕ್ಷಕರ ಸಂಬಂಧಪಟ್ಟ ವಿಷಯದಲ್ಲಿ ಶೇ.60ಕ್ಕಿಂತ ಕಡಿಮೆ ಫಲಿತಾಂಶ ಬಂದಲ್ಲಿ ಅವರ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ತಡೆಹಿಡಿಯುವುದು, ನಿರಂತರವಾಗಿ ಮೂರು ವರ್ಷಗಳು ವಿಫಲವಾದಲ್ಲಿ ಅವರ ವೇತನಾನುದಾನವನ್ನು ಹಿಂಪಡೆಯುವುದು;

5) ಮೇಲ್ಕಂಡ ಷರತ್ತುಗಳನ್ನು ಪೂರೈಸಿರುವ ಅಥವಾ ವಿಫಲವಾಗಿರುವ ಬಗ್ಗೆ ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರು ಪ್ರತಿ ಶೈಕ್ಷಣಿಕ ವರ್ಷದ ಎಸ್.ಎಸ್.ಎಲ್.ಸಿ ಫಲಿತಾಂಶ ಪ್ರಕಟಗೊಂಡ ನಂತರ ಇದರ ಮೇಲುಸ್ತುವಾರಿ ಕ್ರಮವನ್ನು ಕಡ್ಡಾಯವಾಗಿ' ಕೈಗೊಳ್ಳುವುದು ಹಾಗೂ ಸಕ್ಷಮ ಪ್ರಾಧಿಕಾರವಾದ ಆಯುಕ್ತರು/ಅಪರ ಆಯುಕ್ತರಿಗೆ ಅನುಸರಣಾ ವರದಿ ಸಲ್ಲಿಸುವುದು.

ಮುಂದುವರೆದು, ಸರ್ಕಾರದ ಆದೇಶ ಸಂಖ್ಯೆ: ಇಡಿ 14 ಎಸ್‌ಇಪಿ 2017. ದಿನಾಂಕ: 29.06.2017ರಲ್ಲಿನ ಉಳಿದ ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ.

Rajyashree V.T
(ವಿ.ಟಿ.ರಾಜ್ಯಶ್ರೀ)
ಸರ್ಕಾರದ ಅಧೀನ ಕಾರ್ಯದರ್ಶಿ, 6/3
ಶಿಕ್ಷಣ ಇಲಾಖೆ (ಪ್ರೌಢ ಶಿಕ್ಷಣ).

ಇವರಿಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
3. ಮಾನ್ಯ ಮುಖ್ಯಮಂತ್ರಿಯವರ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
4. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
5. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ/ಧಾರವಾಡ.
6. ನಿರ್ದೇಶಕರು(ಪ್ರೌಢ ಶಿಕ್ಷಣ), ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
7. ನಿರ್ದೇಶಕರು, ಅಪರ ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ/ಧಾರವಾಡ.
8. ಜಿಲ್ಲಾ ಪಂಚಾಯಿತಿಗಳ ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
9. ಎಲ್ಲಾ ಜಿಲ್ಲಾ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ.
10. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ(ವೆಚ್ಚ-8), ವಿಧಾನ ಸೌಧ, ಬೆಂಗಳೂರು.
11. ಮಾಹಿತಿ ಕೇಂದ್ರ, ಶಿಕ್ಷಣ ಇಲಾಖೆ-ಅಂತರ್ಜಾಲದಲ್ಲಿ ಅಪ್‌ಲೋಡ್ ಮಾಡಲು.
12. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ದಿನಾಂಕ: 01.01.2015 ರಿಂದ 31.12.2015ರವರೆಗೆ ರಾಜ್ಯದ ಅನುದಾನಿತ ಪ್ರೌಢಶಾಲೆಗಳಲ್ಲಿ ನಿವೃತ್ತಿ, ರಾಜೀನಾಮೆ, ಮರಣ, ಸೂಕ್ತ ಪ್ರಾಧಿಕಾರದ ಅನುಮೋದನೆ ಪಡೆದು ಬಡ್ತಿ ಹೊಂದಿರುವ ಹಾಗೂ ಇತರೆ ಕಾರಣಗಳಿಂದ ಖಾಲಿಯಾದ ಬೋಧಕ ಹುದ್ದೆಗಳನ್ನು ಭರ್ತಿಮಾಡಲು ಅನುಮತಿ ನೀಡುವ ಕುರಿತು.

ಓದಲಾಗಿದೆ :-

1. ಸರ್ಕಾರದ ಆದೇಶ ಸಂಖ್ಯೆ: ಇಡಿ 14 ಎಸ್‌ಇಪಿ 2017, ದಿನಾಂಕ: 29.06.2017, 18.07.2017 23.11.2017 ಮತ್ತು 06.02.2018.
2. ಸರ್ಕಾರದ ಪತ್ರ ಸಂಖ್ಯೆ: ಇಡಿ 14 ಎಸ್‌ಇಪಿ 2017, ದಿನಾಂಕ: 27.02.2018 ಮತ್ತು 04.07.2018.
3. ನಿರ್ದೇಶಕರು(ಪ್ರೌಢ ಶಿಕ್ಷಣ), ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ: ಸಿ8(1)ಶಾಶಿಅಖಾಹುಭ ಇತರೆ-1/2014-15, ದಿನಾಂಕ: 03.04.2018 ಮತ್ತು 24.07.2018.

*****

ಪ್ರಸ್ತಾವನೆ:-

ಮೇಲೆ ಕ್ರಮಾಂಕ (1)ರಲ್ಲಿ ಓದಲಾದ ಸರ್ಕಾರದ ಆದೇಶಗಳಲ್ಲಿ ರಾಜ್ಯದ ಅನುದಾನಿತ ಖಾಸಗಿ ಪ್ರೌಢಶಾಲೆಗಳಲ್ಲಿ ನಿವೃತ್ತಿ, ರಾಜೀನಾಮೆ, ಮರಣದಿಂದ ಖಾಲಿಯಾದ ಹಾಗೂ ಸೂಕ್ತ ಪ್ರಾಧಿಕಾರದ ಅನುಮೋದನೆ ಪಡೆದು ಬಡ್ತಿ ಹೊಂದಿರುವ ಹಾಗೂ ಇತರೆ ಕಾರಣಗಳಿಂದ ದಿನಾಂಕ: 31.12.2012ರವರೆಗೆ ಖಾಲಿಯಾದ ಹುದ್ದೆಗಳನ್ನು ಹೆಚ್ಚುವರಿ ಪ್ರಕ್ರಿಯೆಯಲ್ಲಿ ಬಳಸಿಕೊಂಡ ನಂತರ ಬಾಕಿ ಉಳಿದ 1476 ಬೋಧಕ ಹುದ್ದೆಗಳನ್ನು ಹಾಗೂ ದಿನಾಂಕ: 01.01.2013 ರಿಂದ 31.12.2014 ರವರೆಗೆ ಖಾಲಿಯಾದ ಬೋಧಕ ಹುದ್ದೆಗಳನ್ನು ಹೆಚ್ಚುವರಿ ಪ್ರಕ್ರಿಯೆಯಲ್ಲಿ ಬಳಸಿಕೊಂಡ ನಂತರ ಬಾಕಿ ಉಳಿದ 1275 ಬೋಧಕ ಹುದ್ದೆಗಳನ್ನು (ವೃತ್ತಿ/ಚಿತ್ರಕಲಾ/ಸಂಗೀತ ಮುಂತಾದ ವಿಶೇಷ ಶಿಕ್ಷಕರನ್ನು ಹೊರತುಪಡಿಸಿ) ಭರ್ತಿ ಮಾಡಿಕೊಳ್ಳಲು ಆರ್ಥಿಕ ಮಿತವ್ಯಯ ಸಡಿಲಿಸಿ ಅನುಮತಿ ನೀಡಲಾಗಿದೆ.

ಮೇಲೆ ಕ್ರಮಾಂಕ (2)ರಲ್ಲಿ ಓದಲಾದ ಸರ್ಕಾರದ ಪತ್ರಗಳಲ್ಲಿ ರಾಜ್ಯದ ಅನುದಾನಿತ ಖಾಸಗಿ ಪ್ರೌಢಶಾಲೆಗಳಲ್ಲಿ ನಿವೃತ್ತಿ, ರಾಜೀನಾಮೆ, ಮರಣದಿಂದ ಖಾಲಿಯಾದ ಹಾಗೂ ಸೂಕ್ತ ಪ್ರಾಧಿಕಾರದ ಅನುಮೋದನೆ ಪಡೆದು ಬಡ್ತಿ ಹೊಂದಿರುವ ಹಾಗೂ ಇತರೆ ಕಾರಣಗಳಿಂದ ದಿನಾಂಕ: 31.12.2017ರವರೆಗೆ ಖಾಲಿಯಾದ ಬೋಧಕ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ನೀಡುವ ಬಗ್ಗೆ ವರ್ಷಾವಾರು ಖಾಲಿ ಇರುವ ಶಿಕ್ಷಕ ಹುದ್ದೆಗಳ ಕ್ರೋಢೀಕೃತ ಮಾಹಿತಿಯೊಂದಿಗೆ ಸದರಿ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ನೀಡಿದಲ್ಲಿ ತಗಲಬಹುದಾದ ಆರ್ಥಿಕ ಹೊರೆ ಮತ್ತು ಸ್ಪಷ್ಟ ಅಭಿಪ್ರಾಯದ ವರದಿ ನೀಡುವಂತೆ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರನ್ನು ಕೋರಲಾಗಿತ್ತು.

ಮೇಲೆ ಕ್ರಮಾಂಕ (3)ರಲ್ಲಿ ಓದಲಾದ ಪತ್ರದಲ್ಲಿ ನಿರ್ದೇಶಕರು (ಪ್ರೌಢ ಶಿಕ್ಷಣ), ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು ರಾಜ್ಯದ ಅನುದಾನಿತ ಖಾಸಗಿ ಪ್ರೌಢಶಾಲೆಗಳಲ್ಲಿ ನಿವೃತ್ತಿ, ರಾಜೀನಾಮೆ, ಮರಣದಿಂದ ಹಾಗೂ ಸೂಕ್ತ ಪ್ರಾಧಿಕಾರದ ಅನುಮೋದನೆ ಪಡೆದು ಬಡ್ತಿ ಹೊಂದಿರುವ ಹಾಗೂ ಇತರೆ ಕಾರಣಗಳಿಂದ ದಿನಾಂಕ: 01.01.2015 ರಿಂದ 31.12.2017ರವರೆಗೆ 2272 ಹುದ್ದೆಗಳು ಖಾಲಿಯಾಗಿದ್ದು, ಈ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ನೀಡಿದಲ್ಲಿ ವಾರ್ಷಿಕವಾಗಿ ಅಂದಾಜು ಎಪ್ಪತ್ತಾರು ಕೋಟಿ ರೂಪಾಯಿಗಳ ಆರ್ಥಿಕ ಹೊರೆ ಆಗುತ್ತದೆ. ಈ ರೀತಿ ಭರ್ತಿ ಮಾಡಲು ಅನುಮತಿ ನೀಡುವಂತೆ ಕೋರಲಾಗಿರುವ ಹುದ್ದೆಗಳಲ್ಲಿ ವೃತ್ತಿ, ಚಿತ್ರಕಲಾ ಮತ್ತು ಸಂಗೀತ ಮುಂತಾದ ವಿಶೇಷ ಶಿಕ್ಷಕರ ಹುದ್ದೆಗಳು ಸೇರಿರುವುದಿಲ್ಲ. ದಿನಾಂಕ: 31.12.2014ರ ಪೂರ್ವದಲ್ಲಿ ವಿವಿಧ ಕಾರಣಗಳಿಂದ ಖಾಲಿಯಾದ ಬೋಧಕ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ನೀಡಿದ್ದು, ಸದರಿ ಹುದ್ದೆಗಳಲ್ಲಿ 457 ಖಾಲಿ ಹುದ್ದೆಗಳನ್ನು ಮಾತ್ರ ಭರ್ತಿ ಮಾಡಲಾಗಿದೆ. ಇನ್ನೂ 2294 ಖಾಲಿ ಹುದ್ದೆಗಳು ಭರ್ತಿಯಾಗದೇ ಬಾಕಿ ಇರುತ್ತವೆ ಎಂದು ವರದಿ ನೀಡಿರುತ್ತಾರೆ.

ಅದರಂತೆ, ಆರ್ಥಿಕ ಇಲಾಖೆಯ ಸಹಮತಿ ಕೋರಲಾಗಿ, ಪ್ರಸ್ತಾವನೆಯನ್ನು ಪರಿಶೀಲಿಸಿ, ರಾಜ್ಯದ ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿ ನಿವೃತ್ತಿ, ರಾಜೀನಾಮೆ, ಮರಣ ಮತ್ತು ಇತರೆ ಕಾರಣಗಳಿಂದ ದಿನಾಂಕ: 31.12.2015ರವರೆಗೆ ಖಾಲಿಯಾದ 882 ಹುದ್ದೆಗಳನ್ನು ಸರ್ಕಾರಿ ಆದೇಶ ಸಂಖ್ಯೆ: ಇಡಿ 14 ಎಸ್‌ಇಪಿ 2017, ದಿನಾಂಕ: 29.06.2017ರಲ್ಲಿ ವಿಧಿಸಿರುವ ಷರತ್ತುಗಳಿಗೆ ಒಳಪಟ್ಟು ನಿಯಮಾನುಸಾರ ಭರ್ತಿ ಮಾಡಲು ಸಹಮತಿ ನೀಡುತ್ತಾ, ಈಗಾಗಲೇ ಭರ್ತಿ ಮಾಡಲು ಬಾಕಿ ಇರುವ 2294 ಹುದ್ದೆಗಳು ಹಾಗೂ ಪ್ರಸ್ತುತ ಸಹಮತಿಸಿರುವ 882 ಹುದ್ದೆಗಳು ಸೇರಿದಂತೆ ಒಟ್ಟು 3176 ಹುದ್ದೆಗಳನ್ನು ಭರ್ತಿ ಮಾಡಿದ ನಂತರವಷ್ಟೇ ಇಂತಹ ಹುದ್ದೆಗಳ ಭರ್ತಿಗೆ ಅನುಮತಿ ಕೋರಿ ಪ್ರಸ್ತಾವನೆ ಸಲ್ಲಿಸುವಂತೆ ತಿಳಿಸಿರುತ್ತದೆ.

ಆರ್ಥಿಕ ಇಲಾಖೆಯು ಸಹಮತಿಸಿರುವಂತೆ ರಾಜ್ಯದ ಅನುದಾನಿತ ಪ್ರೌಢಶಾಲೆಗಳಲ್ಲಿ ನಿವೃತ್ತಿ, ರಾಜೀನಾಮೆ, ಮರಣ, ಸೂಕ್ತ ಪ್ರಾಧಿಕಾರದ ಅನುಮೋದನೆ ಪಡೆದು ಬಡ್ತಿ ಹೊಂದಿರುವ ಹಾಗೂ ಇತರೆ ಕಾರಣಗಳಿಂದ ದಿನಾಂಕ: 01.01.2015 ರಿಂದ 31.12.2015ರವರೆಗೆ ಖಾಲಿಯಾದ 882 ಬೋಧಕ ಹುದ್ದೆಗಳನ್ನು (ವೃತ್ತಿ/ಚಿತ್ರಕಲಾ/ಸಂಗೀತ ಮುಂತಾದ ವಿಶೇಷ ಶಿಕ್ಷಕರನ್ನು ಹೊರತುಪಡಿಸಿ) ಸರ್ಕಾರದ ಆದೇಶ ಸಂಖ್ಯೆ: ಇಡಿ 14 ಎಸ್‌ಇಪಿ 2017, ದಿನಾಂಕ: 29.06.2017, 18.07.2017, 23.11.2017 ಮತ್ತು 06.02.2018ರಲ್ಲಿನ ಷರತ್ತುಗಳಿಗೊಳಪಟ್ಟು ಭರ್ತಿ ಮಾಡಲು ಅನುಮತಿ ನೀಡಲು ಸರ್ಕಾರವು ನಿರ್ಣಯಿಸಿ ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರಿ ಆದೇಶ ಸಂಖ್ಯೆ : ಇಡಿ 14 ಎಸ್‌ಇಪಿ 2017,</u>**

**<u>ಬೆಂಗಳೂರು, ದಿನಾಂಕ : 25ನೇ ಸೆಪ್ಟೆಂಬರ್, 2018.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ರಾಜ್ಯದ ಅನುದಾನಿತ ಖಾಸಗಿ ಪ್ರೌಢಶಾಲೆಗಳಲ್ಲಿ ನಿವೃತ್ತಿ, ರಾಜೀನಾಮೆ, ಮರಣದಿಂದ ಖಾಲಿಯಾದ ಹಾಗೂ ಸೂಕ್ತ ಪ್ರಾಧಿಕಾರದ ಅನುಮೋದನೆ ಪಡೆದು ಬಡ್ತಿ ಹೊಂದಿರುವ ಹಾಗೂ ಇತರೆ ಕಾರಣಗಳಿಂದ ದಿನಾಂಕ: 01.01.2015 ರಿಂದ 31.12.2015 ರವರೆಗೆ ಖಾಲಿಯಾದ 882 ಬೋಧಕ ಹುದ್ದೆಗಳನ್ನು (ವೃತ್ತಿ/ಚಿತ್ರಕಲಾ/ಸಂಗೀತ ಮುಂತಾದ ವಿಶೇಷ ಶಿಕ್ಷಕರನ್ನು ಹೊರತುಪಡಿಸಿ, ಬೆಂಗಳೂರು/ಮೈಸೂರು ವಿಭಾಗ-475 ಹುದ್ದೆಗಳು, ಧಾರವಾಡ ವಿಭಾಗ-283 ಹುದ್ದೆಗಳು ಮತ್ತು ಕಲಬುರಗಿ ವಿಭಾಗ-124 ಹುದ್ದೆಗಳು) ಭರ್ತಿ ಮಾಡಿಕೊಳ್ಳಲು ಸರ್ಕಾರದ ಆದೇಶ ಸಂಖ್ಯೆ: ಇಡಿ 14 ಎಸ್‌ಇಪಿ 2017, ದಿನಾಂಕ: 29.06.2017, 18.07.2017, 23.11.2017 ಮತ್ತು 06.02.2018ರಲ್ಲಿನ ಷರತ್ತುಗಳಿಗೊಳಪಟ್ಟು ಆರ್ಥಿಕ ಮಿತವ್ಯಯ ಸಡಿಲಿಸಿ ಅನುಮತಿ ನೀಡಿ ಆದೇಶಿಸಿದೆ.

2. ಈ ಆದೇಶವನ್ನು ಆರ್ಥಿಕ ಇಲಾಖೆಯು ಅನಧಿಕೃತ ಟಿಪ್ಪಣಿ ಸಂಖ್ಯೆ : ಎಫ್‌ಡಿ 800 ವೆಚ್ಚ-8/2018, ದಿನಾಂಕ : 21.08.2018ರಲ್ಲಿ ನೀಡಿರುವ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ.

Rajyashree V.T

(ವಿ.ಟಿ.ರಾಜ್ಯಶ್ರೀ)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಪ್ರೌಢ ಶಿಕ್ಷಣ).

<u>ಇವರಿಗೆ:</u>

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
3. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ/ಧಾರವಾಡ.
4. ನಿರ್ದೇಶಕರು(ಪ್ರೌಢ ಶಿಕ್ಷಣ), ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
5. ನಿರ್ದೇಶಕರು, ಅಪರ ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ/ಧಾರವಾಡ.
6. ಜಿಲ್ಲಾ ಪಂಚಾಯಿತಿಗಳ ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
7. ಎಲ್ಲಾ ಜಿಲ್ಲಾ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ. (ಆಯುಕ್ತರು/ಅಪರ ಆಯುಕ್ತರ ಮೂಲಕ).
8. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ(ವೆಚ್ಚ-8), ವಿಧಾನ ಸೌಧ, ಬೆಂಗಳೂರು.
9. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

<u>ಪ್ರತಿ ಮಾಹಿತಿಗಾಗಿ:-</u>

1. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.
2. ಮಾಹಿತಿ ಕೇಂದ್ರ, ಶಿಕ್ಷಣ ಇಲಾಖೆ-ಅಂತರ್ಜಾಲದಲ್ಲಿ ಅಪ್‌ಲೋಡ್ ಮಾಡಲು.

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಅನುದಾನಿತ ಬೋಧಕ ಹುದ್ದೆಗಳನ್ನು ತುಂಬುವ ಬಗ್ಗೆ.

**ಓದಲಾಗಿದೆ:-** 1) ಸರ್ಕಾರದ ಆದೇಶ ಸಂಖ್ಯೆ:ಇಡಿ 16 ಟಿಪಿಯು 2011 ದಿನಾಂಕ:30-09-2011.

2) ಸರ್ಕಾರದ ಪತ್ರ ಸಂಖ್ಯೆ:ಇಡಿ 159 ಟಿಪಿಯು 2012 ದಿನಾಂಕ:22-11-2013.

3) ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆರವರ ಪತ್ರ ಸಂಖ್ಯೆ:ಪಪೂಶಿಇ/ಸಿಬ್ಬಂದಿ-3/ಡಿಪಿ/ಉಪನ್ಯಾಸಕರು/401/2006-07 ದಿನಾಂಕ:28-06-2016 ಮತ್ತು ದಿನಾಂಕ: 23-08-2016.

**ಪ್ರಸ್ತಾವನೆ:**

ಮೇಲೆ (1) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ರಾಜ್ಯದ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ನಿಧನ, ನಿವೃತ್ತಿ, ರಾಜೀನಾಮೆ ಮತ್ತು ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದ ಬಡ್ತಿಯಿಂದ ತೆರವಾದ 189 ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರದ ಅನುಮತಿಯನ್ನು ನೀಡಲಾಗಿತ್ತು. ಮೇಲೆ (2)ರಲ್ಲಿ ಓದಲಾದ ಸರ್ಕಾರದ ಪತ್ರದಲ್ಲಿ ದಿನಾಂಕ :01-04-2013ರವರೆಗೆ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ತೆರವಾದ ವಿವಿಧ ವಿಷಯಗಳ 291 ಅನುದಾನಿತ ಖಾಲಿ ಹುದ್ದೆಗಳನ್ನು ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿನ ಷರತ್ತುಗಳಿಗೊಳಪಟ್ಟು ತುಂಬಿಕೊಳ್ಳಲು ಅನುಮತಿ ನೀಡಲಾಗಿದೆ.

ಪ್ರಸ್ತುತ ರಾಜ್ಯದ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ದಿನಾಂಕ :31-03-2013ರವರೆಗೆ ತೆರವಾದ (ಈಗಾಗಲೆ ಅನುಮತಿ ನೀಡಿರುವ ಹುದ್ದೆಗಳನ್ನು ಹೊರತುಪಡಿಸಿ) ಮತ್ತು ದಿನಾಂಕ :01-04-2013ರ ನಂತರ ತೆರವಾದ ವಿವಿಧ ವಿಷಯಗಳ ಉಪನ್ಯಾಸಕರ ಹುದ್ದೆಗಳನ್ನು ತುಂಬಿಕೊಳ್ಳಲು ಅನುಮತಿ ನೀಡುವ ಬಗ್ಗೆ ಮೇಲೆ(3)ರಲ್ಲಿ ಓದಲಾದ ಪತ್ರಗಳಲ್ಲಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆರವರ ಪ್ರಸ್ತಾವನೆಯನ್ನು ಪರಿಶೀಲಿಸಿ, ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ವಿವಿಧ ವಿಷಯಗಳ ಉಪನ್ಯಾಸಕರ ಹುದ್ದೆಗಳನ್ನು ತುಂಬಲು ಅನುಮತಿ ನೀಡಲು ನಿರ್ಧರಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ

**ಸರ್ಕಾರದ ಆದೇಶ ಸಂಖ್ಯೆ: ಇಡಿ 144 ಟಿಪಿಯು 2016, ಬೆಂಗಳೂರು, ದಿನಾಂಕ:09/02/2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ರಾಜ್ಯದ ಖಾಸಗಿ ಪದವಿ ಪೂರ್ವ ಕಾಲೇಜುಗಳಲ್ಲಿ ದಿನಾಂಕ :31-12-2015ರವರೆಗೆ ನಿಧನ, ನಿವೃತ್ತಿ, ರಾಜೀನಾಮೆ, ಸಕ್ಷಮ ಪ್ರಾಧಿಕಾರದಿಂದ ಅನುಮೋದಿತವಾದ ಬಡ್ತಿ ಮೂಲಕ ತೆರವಾದ ಮತ್ತು ಇತರ ಕಾರಣಗಳಿಂದ ತೆರವಾದ ಅನುದಾನಿತ ಖಾಲಿ ಹುದ್ದೆಗಳ ಪೈಕಿ ದಿನಾಂಕ: 31-03-2013 ರವರೆಗೆ ತೆರವಾಗಿದ್ದು, ನಿಗದಿತ 20 ಗಂಟೆಗಳ ಕಾರ್ಯಭಾರವನ್ನು ಹೊಂದಿರುವ 106 ವಿಷಯಗಳ ಉಪನ್ಯಾಸಕರ ಹುದ್ದೆಗಳನ್ನು (ಸದರಿ ಆದೇಶಕ್ಕೆ ಅನುಬಂಧಿಸಿರುವ ಅನುಬಂಧ-ಅ ರಲ್ಲಿನ) ಮತ್ತು ದಿನಾಂಕ: 01-04-2013 ರಿಂದ 31-12-2015ರ ವರೆಗೆ ತೆರವಾಗಿದ್ದು, ನಿಗದಿತ 20 ಗಂಟೆಗಳ ಕಾರ್ಯಭಾರವನ್ನು ಹೊಂದಿರುವ 221 ವಿಷಯಗಳ ಉಪನ್ಯಾಸಕರ ಹುದ್ದೆಗಳನ್ನು (ಸದರಿ ಆದೇಶಕ್ಕೆ ಅನುಬಂಧಿಸಿರುವ ಅನುಬಂಧ-ಆ ರಲ್ಲಿನ)

[illegible] ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಆರ್ಥಿಕ ಮಿತವ್ಯಯ ಸಡಿಲಿಸಿ ಅನುಮತಿ ನೀಡಲಾಗಿದೆ

1) ನಿರ್ದಿಷ್ಟ ಖಾಲಿ ಹುದ್ದೆಯು (ನಿಧನ, ನಿವೃತ್ತಿ ಅಥವಾ ರಾಜೀನಾಮೆಯಿಂದ ತೆರವಾದ) ಮೂಲತಃ ಅನುದಾನಿತ ಹುದ್ದೆಯಾಗಿರತಕ್ಕದ್ದು.
2) ಅರ್ಹತೆ, ವಿದ್ಯಾರ್ಹತೆ, ಮೀಸಲಾತಿ ಇತ್ಯಾದಿ ಮಾನದಂಡಗಳನ್ನು ಪಾಲಿಸಿ, ಪಾರದರ್ಶಕವಾಗಿ ಆಯ್ಕೆ ಪ್ರಕ್ರಿಯೆಯನ್ನು ನಡೆಸತಕ್ಕದ್ದು. ಮೇಲಿನ ವಿವರಗಳನ್ನು ಖಚಿತಪಡಿಸಿಕೊಂಡ ನಂತರವೇ ಸಕ್ಷಮ ಪ್ರಾಧಿಕಾರವು ನೇಮಕಾತಿಯನ್ನು ಅನುಮೋದಿಸತಕ್ಕದ್ದು.
3) ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ತೆರವಾದ ಬೋಧಕ ಹುದ್ದೆಗಳ ನೇಮಕಾತಿಯನ್ನು ಅನುಮೋದಿಸಲು ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಯವರು ಸಕ್ಷಮ ಪ್ರಾಧಿಕಾರಿಯಾಗಿರುತ್ತಾರೆ.
4) ಕರ್ನಾಟಕ ಪದವಿ ಪೂರ್ವ ಶಿಕ್ಷಣ (ಶೈಕ್ಷಣಿಕ, ನೋಂದಣಿ, ಮಾನ್ಯತೆ, ಅನುದಾನ, ಧನಸಹಾಯ ಇತರ) ನಿಯಮಗಳು, 2006 ಮತ್ತು ಕರ್ನಾಟಕ ಶಿಕ್ಷಣ ಕಾಯ್ದೆ, 1983 ರಲ್ಲಿನ ಅವಕಾಶಗಳನ್ವಯ ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆ ನಡೆಸಿರುವುದನ್ನು ಖಚಿತಪಡಿಸಿಕೊಂಡ ನಂತರವೇ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆರವರು ನೇಮಕಾತಿಯನ್ನು ಅನುಮೋದನೆಗಾಗಿ ಸರ್ಕಾರದ ಆದೇಶ ಸಂಖ್ಯೆ:ಇಡಿ 16 ಟಿಪಿಯು 2011 ದಿನಾಂಕ:30-09-2011 ಮತ್ತು ತಿದ್ದುಪಡಿ ಆದೇಶ ಸಂಖ್ಯೆ:ಇಡಿ 16 ಟಿಪಿಯು 2011 ದಿನಾಂಕ:03-11-2011ರಲ್ಲಿ ನಿಗದಿಪಡಿಸಿರುವ ಚೆಕ್‌ಲಿಸ್ಟ್‌ನಲ್ಲಿ ಭರ್ತಿ ಮಾಡಿದ ಮಾಹಿತಿಯೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ:ಆಇ 680 ವೆ-8/2016 ದಿನಾಂಕ:10-01-2017 ಮತ್ತು ಆಇ 41 ವೆ-8/2017 ದಿನಾಂಕ:31-01-2017ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಪಿ.ರಾಮಕೃಷ್ಣಯ್ಯ).
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಪದವಿ ಪೂರ್ವ ಶಿಕ್ಷಣ)

---

ಗೆ, ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ ಇವರಿಗೆ ಕಳುಹಿಸುತ್ತಾ, ಈ ಆದೇಶವನ್ನು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿ, 50 ಪ್ರತಿಗಳನ್ನು ಸರ್ಕಾರದ ಕಾರ್ಯದರ್ಶಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರಿಗೆ ಕಳುಹಿಸಲು ಕೋರಲಾಗಿದೆ.

ಇವರಿಗೆ:-

1. ಮಹಾಲೇಖಪಾಲರು (ಎ ಮತ್ತು ಇ) ಕರ್ನಾಟಕ, ಬೆಂಗಳೂರು.
2. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರಂ 18ನೇ ಕ್ರಾಸ್, ಬೆಂಗಳೂರು.
3. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-8), ವಿಧಾನಸೌಧ, ಬೆಂಗಳೂರು
4. ಎಲ್ಲಾ ಜಿಲ್ಲಾ ಉಪ ನಿರ್ದೇಶಕರು, ಪದವಿ ಪೂರ್ವ ಮತ್ತು ವೃತ್ತಿ ಶಿಕ್ಷಣ ಇಲಾಖೆ.
5. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

ವಿಷಯ: 1993–94 ಮತ್ತು 1994–95 ನೇ ಶೈಕ್ಷಣಿಕ ಸಾಲುಗಳ ಅವಧಿಯಲ್ಲಿ ಪ್ರಾರಂಭಿಸಿ ಸತತವಾಗಿ ನಡೆಸಲಾಗುತ್ತಿರುವ ಖಾಸಗಿ ಪ್ರಾಥಮಿಕ ಶಾಲೆಗಳನ್ನು, ಪ್ರೌಢ ಶಾಲೆಗಳನ್ನು ಮತ್ತು ಪದವಿ ಪೂರ್ವ ಕಾಲೇಜುಗಳನ್ನು ಸಹಾಯಾನುದಾನಕ್ಕೆ ಒಳಪಡಿಸಲು ಆಸ್ಪದ ಕಲ್ಪಿಸುವ ಬಗ್ಗೆ.

ಓದಲಾಗಿದೆ:
(1) ದಿ. 13.09.2002ರ ಸರ್ಕಾರದ ಆದೇಶ ಸಂಖ್ಯೆ ಇಡಿ 65 ವಿವಿಧ 97
(2) ದಿ. 2.1.2006ರ ಸರ್ಕಾರದ ಆದೇಶ ಸಂಖ್ಯೆ ಇಡಿ 114 ಎಸ್‌ಇಪಿ 2004
(3) ದಿ. 03.07.2007ರ ಸರ್ಕಾರದ ಆದೇಶ ಸಂಖ್ಯೆ ಇಡಿ 240 ಎಸ್‌ಇಪಿ 2005
(4) ದಿ. 20.2.2004ರ ಸುತ್ತೋಲೆ ಸಂಖ್ಯೆ ಇಡಿ 110 ಎಸ್‌ಇಪಿ 2003 (ಭಾ–2)
(5) ದಿ. 7.5.2007ರ ಸರ್ಕಾರದ ಆದೇಶ ಸಂಖ್ಯೆ ಇಡಿ 63 ಟಿಪಿಯು 2003
(6) ದಿ: 06.10.2007 ರ ಸರ್ಕಾರದ ಆದೇಶ ಸಂಖ್ಯೆ: ಇಡಿ 59 ಪಿಎಂಸಿ 2006
(7) ದಿನಾಂಕ 26–8–2008ರ ತಿದ್ದೋಲೆ ಸಂಖ್ಯೆ: ಇಡಿ 59 ಪಿಎಂಸಿ 2006

* * * *

ಪ್ರಸ್ತಾವನೆ :–

1. ದಿನಾಂಕ: 01.06.1987 ರಿಂದ 1992–93 ನೇ ಶೈಕ್ಷಣಿಕ ಸಾಲಿನ ಅವಧಿಯಲ್ಲಿ ಪ್ರಾರಂಭಿಸಿ ಸತತವಾಗಿ ನಡೆಸುತ್ತಿರುವ ಖಾಸಗಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳನ್ನು ಹಾಗೂ ಪದವಿ ಪೂರ್ವ ಕಾಲೇಜುಗಳನ್ನು ಸಹಾಯಾನುದಾನಕ್ಕೆ ಒಳಪಡಿಸಲು ಮೇಲೆ (6) ರಲ್ಲಿ ಓದಲಾದ ದಿ: 06.10.2007 ರ ಸರ್ಕಾರದ ಆದೇಶದನ್ವಯ ವಿಧಿಸಲಾದ ಮಾನದಂಡ ಹಾಗೂ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು, ಅದರನ್ವಯ, ಆಸ್ಪದವನ್ನು ಕಲ್ಪಿಸಲಾಗಿದೆ.

2. 2008–09 ನೇ ಸಾಲಿಗೆ ಸಂಬಂಧಿಸಿದ ಆಯವ್ಯಯದ ಭಾಷಣದಲ್ಲಿ ಈ ಕೆಳಕಂಡಂತೆ ಘೋಷಿಸಲಾಗಿದೆ.

> "60. The private schools started upto the year 1992 are being provided grant-in-aid so far. During this year private schools started during 1993 and 1994 will be covered under grant-in-aid as per the eligibility norms."

3. ಅದರಂತೆ, 1993–94 ಮತ್ತು 1994–95 ನೇ ಶೈಕ್ಷಣಿಕ ವರ್ಷಗಳ ಅವಧಿಯಲ್ಲಿ ಪ್ರಾರಂಭಿಸಲಾದ ಖಾಸಗಿ ಪ್ರಾಥಮಿಕ ಶಾಲೆಗಳನ್ನು ಮತ್ತು ಪ್ರೌಢ ಶಾಲೆಗಳನ್ನು ಹಾಗೂ ಪದವಿ ಪೂರ್ವ ಕಾಲೇಜುಗಳನ್ನು ಸಹಾಯಾನುದಾನಕ್ಕೆ ಒಳಪಡಿಸುವ ಕುರಿತು ಸರ್ಕಾರ ಪರಿಶೀಲಿಸಿ, ಈ ಮೂಲಕ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಇಡಿ 217 ಪಿಎಂಸಿ 2008,**
**ಬೆಂಗಳೂರು, ದಿನಾಂಕ: 08.09.2008**

4. ಮೇಲೆ ವಿವರಿಸಿದ ಹಿನ್ನೆಲೆಯಲ್ಲಿ, 1993–94 ಮತ್ತು 1994–95 ನೇ ಶೈಕ್ಷಣಿಕ ಸಾಲುಗಳ ಅವಧಿಯಲ್ಲಿ ಪ್ರಾರಂಭಿಸಿ ವಿಚ್ಛಿನ್ನತೆಯಿಲ್ಲದೇ ನಡೆಸಲಾಗುತ್ತಿರುವ ಖಾಸಗಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳನ್ನು ಹಾಗೂ ಪದವಿ ಪೂರ್ವ ಕಾಲೇಜುಗಳನ್ನು ಮೇಲೆ (6) ರಲ್ಲಿ ಓದಲಾದ ದಿನಾಂಕ: 06.10.2007ರ ಸರ್ಕಾರದ ಆದೇಶವನ್ನು, ಮೇಲೆ (7)ರಲ್ಲಿ ಓದಲಾದ ದಿನಾಂಕ: 26.08.2008 ರ ತಿದ್ದೋಲೆಯೊಂದಿಗೆ ಓದಿಕೊಂಡಂತೆ, ಇವುಗಳನ್ವಯ ವಿಧಿಸಲಾದ ಮಾನದಂಡಕ್ಕೆ ಹಾಗೂ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು, ಸಹಾಯಾನುದಾನಕ್ಕೆ ಒಳಪಡಿಸಲು ಈ ಮೂಲಕ ಆಸ್ಪದ ಕಲ್ಪಿಸಿದೆ.

5. <u>ಸಹಾಯಾನುದಾನ ಕೋರುವ ಕಾರ್ಯವಿಧಾನ:–</u> ಮೇಲೆ (6) ರಲ್ಲಿ ಓದಲಾದ ದಿನಾಂಕ: 06.10.2007 ರ ಸರ್ಕಾರದ ಆದೇಶದ ಕಂಡಿಕೆ–5ರನ್ವಯ ನಿಗಧಿಪಡಿಸಿದ, ಸಹಾಯಾನುದಾನ ಕೋರುವ ಕಾರ್ಯವಿಧಾನವೇ, ಸರ್ಕಾರದ ಈ ಆದೇಶದಡಿ ಸಹಾಯಾನುದಾನ ಕೋರಲು ಅನ್ವಯವಾಗುತ್ತದೆ. ಆ ಕಾರ್ಯ ವಿಧಾನವನ್ನೇ ಯಥಾವತ್ತಾಗಿ ಅನುಸರಿಸತಕ್ಕದ್ದು.

6. 1993–94 ಮತ್ತು 1994–95 ನೇ ಶೈಕ್ಷಣಿಕ ಸಾಲುಗಳ ಅವಧಿಯಲ್ಲಿ ಪ್ರಾರಂಭಿಸಿ ಯಾವುದೇ ವಿಚ್ಛಿನ್ನತೆ ಇಲ್ಲದೇ ಸತತವಾಗಿ ಸಾಮಾನ್ಯ ವರ್ಗಕ್ಕೆ ಸೇರಿದ ಆಡಳಿತ ಮಂಡಳಿಗಳ ವತಿಯಿಂದ ನಡೆಸಲಾಗುತ್ತಿರುವ ಖಾಸಗಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳು ಮತ್ತು ಪದವಿ ಪೂರ್ವ ಕಾಲೇಜುಗಳು (ಅಲ್ಪ ಸಂಖ್ಯಾತರ ವರ್ಗಕ್ಕೆ ಸೇರಿದ ಆಡಳಿತ ಮಂಡಳಿಗಳೂ ಒಳಗೊಂಡಂತೆ) ಸಹಾಯಾನುದಾನಕ್ಕೆ ಅರ್ಹವಾಗಲು, ಮೇಲೆ (6) ರಲ್ಲಿ ಓದಲಾದ ದಿನಾಂಕ: 06.10.2007 ರ ಸರ್ಕಾರದ ಆದೇಶದ ಕಂಡಿಕೆ 4 ರನ್ವಯ, ಅದನ್ನು, ಮೇಲೆ (7)ರಲ್ಲಿ ಓದಲಾದ ದಿನಾಂಕ 26–8–2008ರ ತಿದ್ದೋಲೆಯೊಂದಿಗೆ ಓದಿಕೊಂಡಂತೆ, ಇವುಗಳನ್ವಯ ನಿಗದಿಪಡಿಸಲಾದ ಮಾನದಂಡ ಹಾಗೂ ಷರತ್ತು ಮತ್ತು ನಿಬಂಧನೆಗಳನ್ನು ಪೂರೈಸತಕ್ಕದ್ದು.

7. ಮೇಲೆ (6)ರಲ್ಲಿ ಓದಲಾದ ದಿನಾಂಕ 6–10–2007ರ ಸರ್ಕಾರದ ಆದೇಶದ ಕಂಡಿಕೆ 6,7,8 ಮತ್ತು 9ರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಆಡಳಿತ ಮಂಡಳಿಗಳ ವತಿಯಿಂದ ಪ್ರಾರಂಭಿಸಲಾದ ಖಾಸಗಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳು ಹಾಗೂ ಪದವಿ ಪೂರ್ವ ಕಾಲೇಜುಗಳು ಸಹಾಯಾನುದಾನ ಪಡೆಯಲು ಅರ್ಹವಾಗಲು ಅನ್ವಯಿಸುವ ಮಾನದಂಡ ಮತ್ತು ಷರತ್ತು ಹಾಗೂ ನಿಬಂಧನೆಗಳನ್ನು ನಮೂದಿಸಿದ್ದು, ಅವುಗಳನ್ನು ಯಥಾವತ್ತಾಗಿ, ಈ ಆದೇಶದಡಿ ಸಹಾಯಾನುದಾದ ಪಡೆಯಲು, ಈ ಕೆಳಕಂಡಂತೆ, ಅನ್ವಯಿಸತಕ್ಕದ್ದು:–

(ಅ). 1993–94 ಮತ್ತು 1994–95 ನೇ ಶೈಕ್ಷಣಿಕ ಸಾಲುಗಳ ಅವಧಿಯಲ್ಲಿ ಪ್ರಾರಂಭಿಸಿ ಯಾವುದೇ ವಿಚ್ಛಿನ್ನತೆಯಿಲ್ಲದೆ ಸತತವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಆಡಳಿತ ಮಂಡಳಿಗಳ ವತಿಯಿಂದ ನಡೆಸಲಾಗುತ್ತಿರುವ ಖಾಸಗಿ

ಪ್ರಾಥಮಿಕ ಶಾಲೆಗಳು ಮತ್ತು ಪ್ರೌಢ ಶಾಲೆಗಳು ಸಹಾಯಾನುದಾನಕ್ಕೆ ಅರ್ಹವಾಗಲು, ಮೇಲೆ (1) ರಲ್ಲಿ ಓದಲಾದ ದಿನಾಂಕ: 13.09.2002 ರ ಸರ್ಕಾರದ ಆದೇಶ, ಇದನ್ನು ಮೇಲೆ (4) ರಲ್ಲಿ ಓದಲಾದ ದಿನಾಂಕ: 20.02.2004 ರ ಸುತ್ತೋಲೆಯೊಂದಿಗೆ ಓದಿಕೊಂಡಂತೆ, ಇವುಗಳ ಪ್ರಕಾರ ನಿಗದಿಪಡಿಸಲಾದ ಷರತ್ತು ಮತ್ತು ನಿಬಂಧನೆಗಳನ್ನು ಪೂರೈಸತಕ್ಕದ್ದು;

(ಆ) 1993–94 ಮತ್ತು 1994–95 ನೇ ಶೈಕ್ಷಣಿಕ ಸಾಲುಗಳ ಅವಧಿಯಲ್ಲಿ ಪ್ರಾರಂಭಿಸಿ ವಿಚ್ಛಿನ್ನತೆ ಇಲ್ಲದೇ ಸತತವಾಗಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳಿಗೆ ಸೇರಿದ ಆಡಳಿತ ಮಂಡಳಿಗಳ ವತಿಯಿಂದ ನಡೆಸಲಾಗುತ್ತಿರುವ ಖಾಸಗಿ ಪದವಿ ಪೂರ್ವ ಕಾಲೇಜುಗಳು ಸಹಾಯಾನುದಾನಕ್ಕೆ ಅರ್ಹವಾಗಲು, ಮೇಲೆ (5) ರಲ್ಲಿ ಓದಲಾದ ದಿ. 7.5.2007ರ ಸರ್ಕಾರಿ ಆದೇಶ ಸಂಖ್ಯೆ ಇಡಿ 63 ಟಿಪಿಯು 2003 ರನ್ವಯ ನಿಗದಿಪಡಿಸಲಾದ ಷರತ್ತು ಮತ್ತು ನಿಬಂಧನೆಗಳನ್ನು ಪೂರೈಸತಕ್ಕದ್ದು. ಮತ್ತು

(ಇ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಆಡಳಿತ ಮಂಡಳಿಗಳ ವತಿಯಿಂದ ನಡೆಸಲಾಗುತ್ತಿರುವ ಸದರಿ ಖಾಸಗಿ ಪ್ರಾಥಮಿಕ ಶಾಲೆಗಳು, ಪ್ರೌಢಶಾಲೆಗಳು ಮತ್ತು ಪದವಿ ಪೂರ್ವ ಕಾಲೇಜುಗಳನ್ನು ಸಹಾಯಾನುದಾನಕ್ಕೆ ಒಳಪಡಿಸುವ ಪ್ರಸ್ತಾವನೆಗಳನ್ನು ಸಂಬಂಧಿಸಿದ ಸಂಸ್ಥೆಗಳು ಸಲ್ಲಿಸುವ ಸಲುವಾಗಿ ಹಾಗೂ ಅವುಗಳನ್ನು ಪರಿಶೀಲಿಸುವ ಸಲುವಾಗಿ ಈಗಾಗಲೇ ನಿಗದಿಪಡಿಸಲಾದ ಚೆಕ್‌ಲಿಸ್ಟ್‌ಗಳನ್ನೆ ಉಪಯೋಗಿಸತಕ್ಕದ್ದು.

8. ಈ ಆದೇಶವನ್ನು ಆರ್ಥಿಕ ಇಲಾಖೆಯು ದಿ. 25.08.2008 ರ ಟಿಪ್ಪಣಿ ಸಂಖ್ಯೆ ಆಇ 839/ವೆಚ್ಚ-8/2008 ರನ್ವಯ ಹಾಗೂ ತದನಂತರದ ದಿನಾಂಕ: 02.09.2008 ರ ಟಿಪ್ಪಣಿ ಸಂಖ್ಯೆ: ಆಇ 871/ವೆಚ್ಚ-8/2008 ರನ್ವಯ ನೀಡಿರುವ ಸಹಮತಿಯಂತೆ ಹಾಗೂ ಯೋಜನಾ ಇಲಾಖೆಯ ದಿ. 26.08.2008 ರ ಟಿಪ್ಪಣಿ ಸಂಖ್ಯೆ ಪಿಡಿ/87/ಎಂಅಂಡ್‌ಇ/2008 ರನ್ವಯ ನೀಡಿರುವ ಸಹಮತಿಯಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

8/9/08

(ಎಸ್.ಹೆಚ್. ಕುರಿಯವರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ

ಇವರಿಗೆ :

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು, ಇವರು ಸರ್ಕಾರದ ಈ ಆದೇಶವನ್ನು ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸಿ, ಅದರ 2000 ಪ್ರತಿಗಳನ್ನು ಶಿಕ್ಷಣ ಇಲಾಖೆಯ ಪ್ರಾಥಮಿಕ ಶಿಕ್ಷಣ-ಎ ಶಾಖೆಗೆ ಒದಗಿಸಬೇಕೆಂದು ಕೋರಿದೆ.

ಪ್ರತಿಯನ್ನು :

1) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು

2) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ.
3) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ
4) ಆಯುಕ್ತರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು
5) ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು
6) ನಿರ್ದೇಶಕರು (ಪ್ರಾಶಿ), ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು
7) ನಿರ್ದೇಶಕರು (ಪ್ರೌಢ ಶಿಕ್ಷಣ), ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು
8) ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು
9) ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಜಂಟಿ/ಉಪ ನಿರ್ದೇಶಕರುಗಳು/ ಕ್ಷೇತ್ರ ಶಿಕ್ಷಣಾಧಿಕಾರಿಗಳು } ಆಯಾಯ ವಿಭಾಗದ ನಿರ್ದೇಶಕರುಗಳು ಇವರಿಗೆ ಪ್ರತಿ ರವಾನಿಸುವುದು
10) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ
11) ಸಾಮಾನ್ಯ–2 ಶಾಖೆ (ವಾರ್ಷಿಕ ಸಂಕಲನ (Annual Compendium) ದಲ್ಲಿ ಸೇರಿಸಲು)
12) ನೋಡಲ್ ಆಫೀಸರ್, ಶಿಕ್ಷಣ ಇಲಾಖೆ, ಮಾಹಿತಿ ಕೇಂದ್ರ, ಬಹುಮಹಡಿ ಕಟ್ಟಡ, ಬೆಂಗಳೂರು. (ವೆಬ್‌ಸೈಟ್‌ನಲ್ಲಿ ಪ್ರಕಟಿಸಲು)

ಕರ್ನಾಟಕ ಸರ್ಕಾರ

ಸಂಖ್ಯೆ: ಇಡಿ 59 ಪಿಎಂಸಿ 2006

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 26.08.2008

## ತಿದ್ದೋಲೆ

**ವಿಷಯ:** ದಿ: 1.6.1987ರಿಂದ 1992-93ನೇ ಶೈಕ್ಷಣಿಕ ಸಾಲಿನ ಅವಧಿಯಲ್ಲಿ ಪ್ರಾರಂಭಿಸಿ ಸತತವಾಗಿ ನಡೆಸಲಾಗುತ್ತಿರುವ ಖಾಸಗಿ ಪ್ರಾಥಮಿಕ ಶಾಲೆಗಳಿಗೆ, ಪ್ರೌಢಶಾಲೆಗಳಿಗೆ ಮತ್ತು ಪದವಿ ಪೂರ್ವ ಕಾಲೇಜುಗಳಿಗೆ ಸಹಾಯಾನುದಾನ ನೀಡಲು ಆಸ್ಪದ ಕಲ್ಪಿಸುವ ಬಗ್ಗೆ

**ಓದಲಾಗಿದೆ:** ದಿ: 6.10.2007ರ ಸರ್ಕಾರದ ಆದೇಶ ಸಂಖ್ಯೆ: ಇಡಿ 59 ಪಿಎಂಸಿ 2006.

* * * * *

ಮೇಲೆ ಓದಲಾದ ದಿ: 6.10.2007ರ ಸರ್ಕಾರದ ಆದೇಶದ ಚೆಕ್‌ಲಿಸ್ಟ್‌ನ ನಮೂನೆ-5ರ ಕ್ರಮ ಸಂಖ್ಯೆ 25ರಲ್ಲಿನ ಈ ಕೆಳಕಂಡ ಭಾಗವನ್ನು ಈ ಮೂಲಕ ತೆಗೆದು ಹಾಕಲಾಗಿದೆ.

"ಆದಾಗ್ಯೂ ಈ ಷರತ್ತನ್ನು ಪೂರೈಸದೇ ಇರುವ ಪ್ರಕರಣಗಳಲ್ಲಿ ಸಂಬಂಧಿಸಿದ ಪದವಿಪೂರ್ವ ಕಾಲೇಜುಗಳನ್ನು ಸಹಾಯಾನುದಾನಕ್ಕೆ ಒಳಪಡಿಸುವ ಕುರಿತು ಪರಿಶೀಲಿಸಿ, ಸಹಾಯಾನುದನಕ್ಕೆ ಒಳಪಡಿಸಿದ 3ನೇ ವರ್ಷದಿಂದ ಅನ್ವಯಿಸುವುದು. ಅಂದರೆ ಅಂತಹ ಪ್ರಕರಣಗಳಲ್ಲಿ ಸಹಾಯಾನುದಾನಕ್ಕೆ ಒಳಪಡಿಸಿದ 3ನೇ ವರ್ಷದ ಅಂತ್ಯದಲ್ಲೂ ದ್ವಿತೀಯ ಪದವಿ ಪೂರ್ವ ಪರೀಕ್ಷೆಯ ಮೇಲಿನಂತೆ ನಿಗದಿಪಡಿಸಿದ ಕನಿಷ್ಠ ಫಲಿತಾಂಶ ಗಳಿಸದೇ ಇದ್ದಲ್ಲಿ ಸಹಾಯಾನುದಾನವನ್ನು ನಿಲ್ಲಿಸಲಾಗುವುದು ಎನ್ನುವ ಷರತ್ತಿಗೆ ಒಳಪಟ್ಟು ಸಹಾಯಾನುದಾನಕ್ಕೆ ಒಳಪಡಿಸುವುದು"

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
26/08/08
(ಎಸ್.ಹೆಚ್. ಕುರಿಯವರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ.

*ಗೆ:*

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು, ಇವರು ಸರ್ಕಾರದ ಈ ಆದೇಶವನ್ನು ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸಿ, ಅದರ 500 ಪ್ರತಿಗಳನ್ನು ಶಿಕ್ಷಣ ಇಲಾಖೆಯ ಪ್ರಾಥಮಿಕ ಶಿಕ್ಷಣ-ಎ ಶಾಖೆಗೆ ಒದಗಿಸಬೇಕೆಂದು ಕೋರಿದೆ.

ಪ್ರತಿಯನ್ನು :-

2) ಆಯುಕ್ತರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರಂ, ಬೆಂಗಳೂರು- 3.
3) ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ.
4) ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ
5) ನಿರ್ದೇಶಕರು (ಪ್ರಾಶಿ), ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
6) ನಿರ್ದೇಶಕರು (ಪ್ರೌಶಿ), ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
7) ನಿರ್ದೇಶಕರು ಅಪರ ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗ/ಧಾರವಾಡ.
8) ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು
9) ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಜಂಟಿ/ಉಪ ನಿರ್ದೇಶಕರುಗಳು/ ಕ್ಷೇತ್ರ ಶಿಕ್ಷಣಾಧಿಕಾರಿಗಳು } ಆಯಾಯ ವಿಭಾಗದ ನಿರ್ದೇಶಕರುಗಳ ಮೂಲಕ
10) ಪದವಿ ಪೂರ್ವ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪ ನಿರ್ದೇಶಕರುಗಳಿಗೆ
11) ಎಲ್ಲಾ ಸಹ/ಉಪ/ಅಧೀನ ಕಾರ್ಯದರ್ಶಿಗಳು/ಶಾಖಾಧಿಕಾರಿಗಳು.
12) ಸಂಪಾದಕರು, ಶಿಕ್ಷಣ ವಾರ್ತೆ, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
13) ಶಾಖಾಧಿಕಾರಿ (ಸಾಮಾನ್ಯ-2), ಶಿಕ್ಷಣ ಇಲಾಖೆ, (ವಾರ್ಷಿಕ ಕಂಪೆಡಿಯಂನಲ್ಲಿ ಪ್ರಕಟಿಸಲು)
14) ನೋಡಲ್ ಆಫೀಸರ್, ಶಿಕ್ಷಣ ಇಲಾಖೆ ಮಾಹಿತಿ ಕೇಂದ್ರ, ಬಹುಮಹಡಿ ಕಟ್ಟಡ, ಬೆಂಗಳೂರು (ವೆಬ್‌ಸೈಟ್‌ನಲ್ಲಿ ಪ್ರಕಟಿಸಲು)
15) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು

KA / BG - GPO/ 2515 /WPP-47/ 2006 - 2008

ಸುವರ್ಣ ಕರ್ನಾಟಕ


# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ಪತ್ರಿಕೆ

| ಭಾಗ - I | ಬೆಂಗಳೂರು, ಸೋಮವಾರ, ಅಕ್ಟೋಬರ್ ೧೫, ೨೦೦೭ (ಆಶ್ವಯುಜ ೨೩, ಶಕ ವರ್ಷ ೧೯೨೯) | ನಂ. ೧೯೦೭ |
|---|---|---|


## ಕರ್ನಾಟಕ ಸರ್ಕಾರದ ನಡವಳಿಗಳು

### ಶಿಕ್ಷಣ ಸಚಿವಾಲಯ

ವಿಷಯ : ದಿ. 01.06.1987 ರಿಂದ 1992-93ನೇ ಶೈಕ್ಷಣಿಕ ಸಾಲಿನ ಅವಧಿಯಲ್ಲಿ ಪ್ರಾರಂಭಿಸಿ ಸತತವಾಗಿ ನಡೆಸಲಾಗುತ್ತಿರುವ ಖಾಸಗಿ ಪ್ರಾಥಮಿಕ ಶಾಲೆಗಳಿಗೆ, ಪ್ರೌಢಶಾಲೆಗಳಿಗೆ ಮತ್ತು ಪದವಿ ಪೂರ್ವ ಕಾಲೇಜುಗಳಿಗೆ ಸಹಾಯಾನುದಾನವನ್ನು ನೀಡಲು ಅಸ್ತವ ಕಲ್ಪಿಸುವ ಬಗ್ಗೆ.

ಓದಲಾಗಿದೆ : (1) ದಿ. 13.09.2002ರ ಸರ್ಕಾರದ ಆದೇಶ ಸಂಖ್ಯೆ ಇಡಿ 65 ವಿವಿದ 97

(2) ದಿ. 2.1.2006ರ ಸರ್ಕಾರದ ಆದೇಶ ಸಂಖ್ಯೆ ಇಡಿ 114 ಎಸ್‌ಇಪಿ 2004

(3) ದಿ. 03.07.2007ರ ಸರ್ಕಾರದ ಆದೇಶ ಸಂಖ್ಯೆ ಇಡಿ 240 ಎಸ್‌ಇಪಿ 2005

(4) ದಿ. 20.2.2004ರ ಸುತ್ತೋಲೆ ಸಂಖ್ಯೆ ಇಡಿ 110 ಎಸ್‌ಇಪಿ 2003 (ಭಾ-2)

(5) ದಿ. 7.5.2007ರ ಸರ್ಕಾರದ ಆದೇಶ ಸಂಖ್ಯೆ ಇಡಿ 63 ಟಿಪಿಯು 2003

* * *

ಪ್ರಸ್ತಾವನೆ :-

ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಪ್ರಾಥಮಿಕ, ಪ್ರೌಢ ಮತ್ತು ಪದವಿಪೂರ್ವ ಶಿಕ್ಷಣ ಸಂಸ್ಥೆಗಳಿಗೆ ಸಹಾಯಾನುದಾನ) ನಿಯಮಗಳು, 1998ರ ನಿಯಮ 3 ರನ್ವಯ, ದಿ. 1.6.1987 ರಂದು ಅಥವಾ ನಂತರ ಪ್ರಾರಂಭಿಸಲಾದ ಖಾಸಗಿ ಶಿಕ್ಷಣ ಸಂಸ್ಥೆಗಳು ಶಾಶ್ವತವಾಗಿ ಸಹಾಯಾನುದಾನವನ್ನು ಪಡೆಯಲು ಅರ್ಹವಾಗುವುದಿಲ್ಲವೆಂದು ನಿಗದಿಪಡಿಸಲಾಗಿದೆ. ತದನಂತರ, ಒಂದು ಅಪವಾದವನ್ನಾಗಿ (as an exception) ಮೇಲೆ (1) ರಲ್ಲಿ ಓದಲಾದ ಸರ್ಕಾರದ ದಿ. 13.9.2002ರ ಆದೇಶದನ್ವಯ, ಅದನ್ನು ಮೇಲೆ (2) ರಲ್ಲಿ ಓದಲಾದ ದಿ. 2.1.2006ರ ಹಾಗೂ ಮೇಲೆ (3) ರಲ್ಲಿ ಓದಲಾದ ದಿ. 3.7.2007ರ ಸರ್ಕಾರದ ಆದೇಶಗಳೊಂದಿಗೆ ಓದಿಕೊಂಡಂತೆ, ಇವುಗಳ ಪ್ರಕಾರ ದಿ. 1.6.1987ರಿಂದ 31.7.1992 ರ ಅವಧಿಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳಿಗೆ ಸೇರಿದ ಆಡಳಿತ ಮಂಡಳಿಗಳು ನಡೆಸುತ್ತಿರುವ ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ಸಹಾಯಾನುದಾನಕ್ಕೆ ಒಳಪಡಿಸಲು ಅಸ್ತವನ್ನು ಕಲ್ಪಿಸಲಾಗಿದೆ. ದಿ. 13.9.2002ರ, ಮೇಲೆ ಉಲ್ಲೇಖಿಸಲಾದ ಆದೇಶದನ್ವಯ ಸಹಾಯಾನುದಾನ ಪಡೆಯಲು ಅರ್ಹವಾಗಲು ನಿಗದಿಪಡಿಸಲಾದ ಎಲ್ಲಾ ಷರತ್ತುಗಳನ್ನು ಸದರಿ ಸಂಸ್ಥೆಗಳ ಪೈಕಿ ಬಹುತೇಕ ಸಂಸ್ಥೆಗಳು ತಕ್ಷಣಕ್ಕೆ ಪೂರೈಸಲು ಸಾಧ್ಯವಾಗದೇ ಇರುವ ವಿಷಯ ಸರ್ಕಾರದ ಗಮನಕ್ಕೆ ಬಂತು. ಆದುದರಿಂದ, ವಿಶೇಷ ಪ್ರಕರಣವೆಂದು ಪರಿಗಣಿಸಿ, ಕೆಲವು ಷರತ್ತುಗಳನ್ನು ಪೂರೈಸಲು ಮೂರು ವರ್ಷಗಳ ಕಾಲಾವಕಾಶ ನೀಡಿ, ಉಳಿದ ಷರತ್ತುಗಳನ್ನು ಪೂರೈಸಿದ ಸದರಿ ಶಾಲೆಗಳಿಗೆ ಸಹಾಯಾನುದಾನ ಮಂಜೂರು ಮಾಡಲು ಸರ್ಕಾರ ತೀರ್ಮಾನಿಸಿತು. ಸಹಾಯಾನುದಾನವನ್ನು ಮಂಜೂರು ಮಾಡಿದ

ಮೂರು ವರ್ಷಗಳ ಒಳಗಾಗಿ ಎಲ್ಲಾ ಷರತ್ತುಗಳನ್ನು ಪೂರೈಸದೇ ಇದ್ದಲ್ಲಿ, ಆ ರೀತಿ ಮಂಜೂರು ಮಾಡಿದ ಸಹಾಯಾನುದಾನವನ್ನು ಹಿಂಪಡೆಯತಕ್ಕದ್ದೆಂಬ ಷರತ್ತಿಗೆ ಅದು ಒಳಪಟ್ಟಿತ್ತು. ಅದರಂತೆ ಮೇಲೆ (4) ರಲ್ಲಿ ಓದಲಾದ ದಿ. 20.2.2004 ರ ಸುತ್ತೋಲೆಯನ್ನು ಹೊರಡಿಸಲಾಯಿತು. ಇದಲ್ಲದೇ, ದಿನಾಂಕ 23-2-2007ರ ಸರ್ಕಾರದ ಅಧಿಸೂಚನೆ ಸಂಖ್ಯೆ ಇಡಿ 138 ಟಿಪಿಯು 2006ರನ್ವಯ, ಅದನ್ನು ಮೇಲೆ (5) ರಲ್ಲಿ ಓದಲಾದ ದಿ. 7.5.2007ರ ಸರ್ಕಾರದ ಆದೇಶದೊಂದಿಗೆ ಓದಿಕೊಂಡಂತೆ, ಇವುಗಳ ಪ್ರಕಾರ, ದಿನಾಂಕ 01-06-1987 ರಿಂದ 31-03-1992ರ ಅವಧಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಆಡಳಿತ ಮಂಡಳಿಗಳ ವತಿಯಿಂದ ಪ್ರಾರಂಭಿಸಿ ಸತತವಾಗಿ ನಡೆಸುತ್ತಿರುವ ಪದವಿ ಪೂರ್ವ ಕಾಲೇಜುಗಳನ್ನು ಸಹಾಯಾನುದಾನಕ್ಕೆ ಒಳಪಡಿಸಲು ಅಸ್ಪದ ಕಲ್ಪಿಸಲಾಗಿದೆ.

2. ಸಹಾಯಾನುದಾನದ ಸೌಲಭ್ಯವನ್ನು ಹೆಚ್ಚಿನ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ವಿಸ್ತರಿಸುವ ಕುರಿತು 2007-08ನೇ ಸಾಲಿಗೆ ಸಂಬಂಧಿಸಿದಂತೆ ಆಯವ್ಯಯದ ಭಾಷಣದಲ್ಲಿ ಈ ಕೆಳಗಿನಂತೆ ಘೋಷಿಸಲಾಗಿದೆ.

> "143. ದಿನಾಂಕ 01-06-1987 ರಿಂದ 01-07-1992 ರವರೆಗಿನ ನಡುವೆ ಆರಂಭವಾಗಿರುವ ಪರಿಶಿಷ್ಟ ಜಾತಿ / ಪಂಗಡಗಳ ಆಡಳಿತ ವರ್ಗಕ್ಕೆ ಸೇರಿದ ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ಸರ್ಕಾರಿ ಅನುದಾನಕ್ಕೆ ಒಳಪಡಿಸಲಾಗಿದೆ. ಈ ಅನುದಾನ ಸೌಲಭ್ಯವನ್ನು ಶಿಕ್ಷಣ ಇಲಾಖೆಯು ನಿಗದಿಪಡಿಸಿರುವ ಷರತ್ತುಗಳನ್ನು ಪೂರೈಸಿರುವ ಸಾಮಾನ್ಯ ವರ್ಗಕ್ಕೆ ಸೇರಿದ ಆಡಳಿತ ಮಂಡಳಿಗಳ, 1992-93 ಮತ್ತು ಅದಕ್ಕೂ ಹಿಂದೆ ಆರಂಭವಾಗಿರುವ ಪ್ರಾಥಮಿಕ, ಹೈಸ್ಕೂಲ್ ಮತ್ತು ಪಿ.ಯು. ಕಾಲೇಜುಗಳಿಗೂ ಕೂಡ ವಿಸ್ತರಿಸಲಾಗುವುದು."

3. 2007-08ನೇ ಸಾಲಿಗೆ ಸಂಬಂಧಿಸಿದ ಆಯವ್ಯಯದ ಭಾಷಣದಲ್ಲಿ ಹಿಂದಿನ ಕಂಡಿಕೆಯಲ್ಲಿ ವಿವರಿಸಲಾದ ಘೋಷಣೆಯನ್ವಯ ಪರಿಶೀಲಿಸಿ, ದಿ. 1.6.1987 ರಿಂದ 1992-93ನೇ ಶೈಕ್ಷಣಿಕ ಸಾಲಿನವರೆಗಿನ ಅವಧಿಯಲ್ಲಿ ಪ್ರಾರಂಭಿಸಿ ಸತತವಾಗಿ ನಡೆಸುತ್ತಿರುವ ಖಾಸಗಿ ಪ್ರಾಥಮಿಕ ಶಾಲೆಗಳಿಗೆ, ಪ್ರೌಢಶಾಲೆಗಳಿಗೆ ಮತ್ತು ಪದವಿ ಪೂರ್ವ ಕಾಲೇಜುಗಳಿಗೆ ಸಹಾಯಾನುದಾನವನ್ನು ನೀಡುವ ಬಗ್ಗೆ ನಿರ್ಧರಿಸಿ, ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ ಇಡಿ 59 ಪಿಎಂಸಿ 2006,
ಬೆಂಗಳೂರು, ದಿನಾಂಕ 06.10.2007

4. ಪ್ರಸ್ತಾವನೆಯಲ್ಲಿ ವಿವರಿಸಿದ ಸನ್ನಿವೇಶಗಳ ಹಿನ್ನಲೆಯಲ್ಲಿ, ದಿ. 1.6.1987 ರಿಂದ 1992-93ನೇ ಶೈಕ್ಷಣಿಕ ಸಾಲಿನ ಅವಧಿಯಲ್ಲಿ ಪ್ರಾರಂಭಿಸಿ ಯಾವುದೇ ವಿಚ್ಛಿನ್ನತೆ ಇಲ್ಲದೇ ನಡೆಸಲಾಗುತ್ತಿರುವ ಖಾಸಗಿ ಪ್ರಾಥಮಿಕ ಶಾಲೆಗಳು, ಪ್ರೌಢಶಾಲೆಗಳು ಮತ್ತು ಪದವಿಪೂರ್ವ ಕಾಲೇಜುಗಳನ್ನು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಸಹಾಯಾನುದಾನಕ್ಕೆ ಒಳಪಡಿಸಲು ಈ ಮೂಲಕ ಅಸ್ಪದ ಕಲ್ಪಿಸಿದೆ :-

(1) ದಿನಾಂಕ 1-6-1987 ರಿಂದ 1992-93ನೇ ಶೈಕ್ಷಣಿಕ ಸಾಲಿನ ಅವಧಿಯಲ್ಲಿ ಸಂಬಂಧಿಸಿದ ಖಾಸಗಿ ಪ್ರಾಥಮಿಕ ಶಾಲೆ ಅಥವಾ ಪ್ರೌಢ ಶಾಲೆ ಅಥವಾ ಪದವಿ ಪೂರ್ವ ಕಾಲೇಜುಗಳನ್ನು ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದು ಪ್ರಾರಂಭಿಸಿ ಇಲ್ಲಿಯವರೆಗೆ ಯಾವುದೇ ವಿಚ್ಛಿನ್ನತೆ ಇಲ್ಲದೇ ಸತತವಾಗಿ ನಡೆಸುತ್ತಿರತಕ್ಕದ್ದು. ಈ ಅವಧಿಯಲ್ಲಿ ಯಾವುದೇ ವಿಚ್ಛಿನ್ನತೆ ಇಲ್ಲದೇ ಸತತವಾಗಿ ವಿದ್ಯಾರ್ಥಿಗಳನ್ನು ಪಬ್ಲಿಕ್ ಪರೀಕ್ಷೆಗಳಿಗೆ ಕೂಡಿಸಿರತಕ್ಕದ್ದು;

(2) ಈ ರೀತಿ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದು ಪ್ರಾರಂಭವಾದ ಸದರಿ ಖಾಸಗಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳನ್ನು ಹಾಗೂ ಪದವಿ ಪೂರ್ವ ಕಾಲೇಜುಗಳನ್ನು ಯಾವುದೇ ವಿಚ್ಛಿನ್ನತೆ ಇಲ್ಲದೇ ಸತತವಾಗಿ ನಡೆಸುತ್ತಿರಬೇಕು;

(3) ದಾಖಲಾತಿಯಲ್ಲಿ ಮೀಸಲಾತಿಗೆ ಸಂಬಂಧಿಸಿದಂತೆ ದಿನಾಂಕ 22-11-2006ರ ಆದೇಶ ಸಂಖ್ಯೆ ಇಡಿ 48 ಎಸ್‌ಇಪಿ 2006(P), ದಿನಾಂಕ 27-12-2006ರ ಆದೇಶ ಸಂಖ್ಯೆ ಇಡಿ 380 ಎಸ್‌ಇಪಿ 2006ಮತ್ತು ದಿನಾಂಕ 24-3-2007ರ ಆದೇಶ ಸಂಖ್ಯೆ ಇಡಿ 46 ಎಸ್‌ಇಪಿ 2006(ಭಾಗ), ಇವುಗಳ ಪ್ರಕಾರ ಸರ್ಕಾರ ನಿಗದಿಪಡಿಸಿದ ಶೇಕಡಾವಾರಿನ ಪ್ರಕಾರ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ಸೇರಿದ ಮಕ್ಕಳಿಗೆ ದಾಖಲಾತಿಯಲ್ಲಿ ಪ್ರಾತಿನಿಧ್ಯತೆಯನ್ನು ನೀಡಿರತಕ್ಕದ್ದು. (ಅಲ್ಪ ಸಂಖ್ಯಾತವೆಂದು ಪ್ರಮಾಣ ಪತ್ರ ಪಡೆದ/ಘೋಷಿಸಲ್ಪಟ್ಟ ಖಾಸಗಿ ಶಾಲೆಗಳು ಮತ್ತು

ಪದವಿ ಪೂರ್ವ ಕಾಲೇಜುಗಳಿಗೆ ಸಂಬಂಧಿಸಿದಂತೆ ದಾಖಲಾತಿಯಲ್ಲಿ ಮೀಸಲಾತಿಗೆ ಸಂಬಂಧಿಸಿದ ಆದೇಶಗಳು ಅನ್ವಯಿಸತಕ್ಕದ್ದಲ್ಲ) ;

(4) ಸಂಬಂಧಿಸಿದ ಶಾಲೆ ಅಥವಾ ಪದವಿಪೂರ್ವ ಕಾಲೇಜು ನೊಂದಣಿಯಾಗಿರತಕ್ಕದ್ದು ಹಾಗೂ ಮಾನ್ಯತೆ ಪಡೆದಿರತಕ್ಕದ್ದು ಮತ್ತು ಸಹಾಯಾನುದಾನ ನೀಡುವ ವರ್ಷದವರೆಗೆ ನೋಂದಣಿ ಮತ್ತು ಮಾನ್ಯತೆಯ ನವೀಕರಣವನ್ನು ಪಡೆದಿರತಕ್ಕದ್ದು. ಆದಾಗ್ಯೂ, ಹಾಗಿಲ್ಲದಿದ್ದಲ್ಲಿ, ಸಂಬಂಧಿಸಿದ ಖಾಸಗಿ ಶಾಲೆ/ಪದವಿಪೂರ್ವ ಕಾಲೇಜು ಸತತವಾಗಿ ನಡೆದಿದ್ದು, ಸಕಾರಣಕ್ಕಾಗಿ ಹಿಂದಿನ ಕೆಲವು ವರ್ಷಗಳಿಗೆ ಮಾನ್ಯತೆಯನ್ನು ಪಡೆಯದೇ ಇದ್ದರೂ, ಸಹಾಯಾನುದಾನಕ್ಕೆ ಒಳಪಡಿಸುವ ಸಮಯದಲ್ಲಿ (ಅಂದರೆ, ಇತ್ತೀಚಿನ) ಮಾನ್ಯತೆ ಪಡೆದಿದ್ದಲ್ಲಿ, ಅದರ ಆಧಾರದ ಮೇಲೆ ಸಹಾಯಾನುದಾನಕ್ಕೆ ಒಳಪಡಿಸುವ ಕುರಿತು ಪರಿಗಣಿಸಬಹುದು;

(5) ಸಂಬಂಧಿಸಿದ ಶಾಲೆ/ಪದವಿಪೂರ್ವ ಕಾಲೇಜು ಸರ್ಕಾರ ನಿಗದಿಪಡಿಸಿರುವಂತೆ ಕನಿಷ್ಠ ಮೂಲಭೂತ ಸೌಲಭ್ಯಗಳಾದ ಕಟ್ಟಡ, ಪೀಠೋಪಕರಣ, ಪಾಠೋಪಕರಣ, ಗ್ರಂಥಾಲಯ, ಪ್ರಯೋಗಶಾಲೆ ಮತ್ತು ಕುಡಿಯುವ ನೀರು, ಶೌಚಾಲಯ, ವಿದ್ಯುತ್ ಸೌಲಭ್ಯ, ಆಟದ ಮೈದಾನ ಮುಂತಾದ ಸೌಲಭ್ಯಗಳನ್ನು ಕಡ್ಡಾಯವಾಗಿ ಹೊಂದಿರಬೇಕು. ಅಲ್ಲದೆ ಶಾಲೆಯ ಸುತ್ತಮುತ್ತಲಿನ ಪ್ರದೇಶವು ಆರೋಗ್ಯಕರವಾದ ಹಾಗೂ ನಿರ್ಮಲವಾದ ವಾತಾವರಣವನ್ನು ಹೊಂದಿರಬೇಕು. ಮಕ್ಕಳ ಶೈಕ್ಷಣಿಕ ಚಟುವಟಿಕೆ ಉತ್ತಮ ಮಟ್ಟದಲ್ಲಿರಲು ಅಗತ್ಯವಾದ ಮೂಲಭೂತ ಸೌಲಭ್ಯಗಳನ್ನು ಒದಗಿಸಿರತಕ್ಕದ್ದು;

ಆದಾಗ್ಯೂ ನಿಗದಿತ ಮೂಲಭೂತ ಸೌಲಭ್ಯಗಳ ಪೈಕಿ ಸ್ವಂತ ಕಟ್ಟಡ ಹಾಗೂ ಆಟದ ಮೈದಾನಕ್ಕೆ ಸಂಬಂಧಿಸಿದಂತೆ ಅವುಗಳನ್ನು ಹೊಂದದೇ ಇರುವ ಖಾಸಗಿ ಶಿಕ್ಷಣ ಸಂಸ್ಥೆಗಳ ಪ್ರಕರಣಗಳಲ್ಲಿ, ಈ ಮೂಲಭೂತ ಸೌಲಭ್ಯಗಳನ್ನು ಹೊಂದಲು ಸಹಾಯಾನುದಾನಕ್ಕೆ ಒಳಪಡಿಸಿದ ದಿನಾಂಕದಿಂದ ಮೂರು ವರ್ಷಗಳ ಕಾಲಾವಕಾಶವನ್ನು ನೀಡಬಹುದು ಹಾಗೂ ಮೂರು ವರ್ಷಗಳು ಮುಗಿಯುವುದರೊಳಗೆ ಈ ಸೌಲಭ್ಯಗಳನ್ನು ಒದಗಿಸಲು ವಿಫಲವಾದಲ್ಲಿ, ಸಹಾಯಾನುದಾನವನ್ನು ನಿಲ್ಲಿಸಲಾಗುವುದು ಎಂಬ ಷರತ್ತಿಗೆ ಒಳಪಟ್ಟು ಸಹಾಯಾನುದಾನಕ್ಕೆ ಒಳಪಡಿಸುವ ಕುರಿತು ಪರಿಗಣಿಸಬಹುದು.

(6) ಆಯಾಯಾ ಖಾಸಗಿ ಶಿಕ್ಷಣ ಸಂಸ್ಥೆ, ಸಂದರ್ಭಾನುಸಾರ, ಅದರ ಸಂಬಂಧಿಸಿದ ಪ್ರಾಥಮಿಕ ಶಾಲೆ ಅಥವಾ ಪ್ರೌಢ ಶಾಲೆ ಅಥವಾ ಪದವಿ ಪೂರ್ವ ಕಾಲೇಜಿಗಾಗಿ ಒದಗಿಸಲಾದ ಮೂಲಭೂತ ಸೌಲಭ್ಯಗಳ ಮೌಲ್ಯ ಮಾಪನವನ್ನು (evaluation of the infrastructure) ಮಾಡತಕ್ಕದ್ದು. ಸರ್ಕಾರದ ಆದೇಶ/ನಿಯಮಗಳನ್ವಯ ನಿಗದಿತ ಮೂಲಭೂತ ಸೌಲಭ್ಯಗಳನ್ನು ಆಧಾರವಾಗಿಟ್ಟುಕೊಂಡು, ಆಯಾಯಾ ಶಾಲೆ / ಪದವಿ ಪೂರ್ವ ಕಾಲೇಜಿಗಾಗಿ ಒದಗಿಸಲಾದ ಮೂಲಭೂತ ಸೌಲಭ್ಯಗಳ ಮೌಲ್ಯಮಾಪನವನ್ನು ಮಾಡತಕ್ಕದ್ದು. ಆ ಮೌಲ್ಯಮಾಪನವನ್ನು ಗರಿಷ್ಠ 100 ಅಂಕಗಳಿಗಾಗಿ ಮಾಡತಕ್ಕದ್ದು. ಆ 100 ಅಂಕಗಳ ಪೈಕಿ, ಸಹಾಯಾನುದಾನ ಪಡೆಯಲು ಅರ್ಹವಾಗಲು ಸಂಬಂಧಿಸಿದ ಶಾಲೆ/ಪದವಿಪೂರ್ವ ಕಾಲೇಜು ಕನಿಷ್ಠ 60 ಅಂಕಗಳನ್ನು ಪಡೆಯತಕ್ಕದ್ದು. 60ಕ್ಕಿಂತ ಕಡಿಮೆ ಅಂಕಗಳನ್ನು ಪಡೆಯುವ ಶಾಲೆ / ಪದವಿಪೂರ್ವ ಕಾಲೇಜು ಸಹಾಯಾನುದಾನ ಪಡೆಯಲು ಅರ್ಹರಾಗುವುದಿಲ್ಲ. ಈ ಉದ್ದೇಶಕ್ಕಾಗಿ, ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಸಂಬಂಧಿಸಿದಂತೆ, ನಿಗದಿತ ಮೂಲಭೂತ ಸೌಲಭ್ಯಗಳ ಪೈಕಿ ಪ್ರತಿಯೊಂದು ಸೌಲಭ್ಯಕ್ಕೆ ಸಂಬಂಧಿಸಿದಂತೆ ಗರಿಷ್ಠ ಅಂಕಗಳೆಷ್ಟು ಎಂಬುವುದನ್ನು ಈ ಆದೇಶಕ್ಕೆ ಲಗತ್ತಿಸಿದ ನಮೂನೆ-1 ರಲ್ಲಿನ ಚೆಕ್‌ಲಿಸ್ಟ್ ರೂಪದಲ್ಲಿ ನಿಗದಿಪಡಿಸಲಾಗಿದೆ. ಹಾಗೂ ಈ ಉದ್ದೇಶಕ್ಕಾಗಿ ಪದವಿಪೂರ್ವ ಕಾಲೇಜುಗಳಿಗೆ ಸಂಬಂಧಿಸಿದಂತೆ ನಿಗದಿತ ಮೂಲಭೂತ ಸೌಲಭ್ಯಗಳ ಪ್ರತಿಯೊಂದು ಅಂಶಕ್ಕೆ ಸಂಬಂಧಿಸಿದಂತೆ ಗರಿಷ್ಠ ಅಂಕಗಳೆಷ್ಟು ಎಂಬುವುದನ್ನು ನಮೂನೆ-2 ರಲ್ಲಿನ ಚೆಕ್‌ಲಿಸ್ಟ್ ರೂಪದಲ್ಲಿ ನಿಗದಿಪಡಿಸಲಾಗಿದೆ. ಆ ಚೆಕ್‌ಲಿಸ್ಟ್‌ಗಳಲ್ಲಿಯೇ ಮೌಲ್ಯಮಾಪನ ಮಾಡತಕ್ಕದ್ದು.

(7) ಹುದ್ದೆಗಳನ್ನು ತುಂಬುವುದಕ್ಕೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಜಾರಿಯಲ್ಲಿರುವ ಮಿತವ್ಯಯ ಆದೇಶಗಳಿಗೆ ಒಳಪಟ್ಟು ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಅನುದಾನಿತ ಖಾಸಗಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಂಸ್ಥೆಗಳ ನೌಕರರ ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳು, 1999ರ ಅನೆಕ್ಷರ್-4 (ಖಾಸಗಿ ಪ್ರೌಢ ಶಾಲೆಗಳಿಗೆ ಸಂಬಂಧಿಸಿದಂತೆ) ಮತ್ತು ಅನೆಕ್ಷರ್-5ರನ್ವಯ (ಖಾಸಗಿ ಪ್ರಾಥಮಿಕ ಶಾಲೆಗಳಿಗೆ ಸಂಬಂಧಿಸಿದಂತೆ) ಸರ್ಕಾರ ನಿಗದಿಪಡಿಸಿರುವಂತೆ ಮಾದರಿ ಸಿಬ್ಬಂದಿಯನ್ವಯ ಮಾಡಲಾದ ನೇಮಕಾತಿಗಳನ್ನು ಮಾತ್ರ ಸಹಾಯಾನುದಾನದ ಉದ್ದೇಶಕ್ಕಾಗಿ ಪರಿಗಣಿಸತಕ್ಕದ್ದು. ಖಾಸಗಿ ಪದವಿಪೂರ್ವ ಕಾಲೇಜುಗಳಿಗೆ ಸಂಬಂಧಿಸಿದಂತೆ, ಕರ್ನಾಟಕ ಪದವಿಪೂರ್ವ ಶಿಕ್ಷಣ (ಶೈಕ್ಷಣಿಕ, ನೋಂದಣಿ, ಆಡಳಿತ ಮತ್ತು ಸಹಾಯಾನುದಾನ ಇತ್ಯಾದಿ) ನಿಯಮಗಳು, 2006ರನ್ವಯ ನಿಗದಿಪಡಿಸಲಾದ ಸಿಬ್ಬಂದಿ ಮಾದರಿಯ ಪ್ರಕಾರ ಮಾಡಲಾದ ನೇಮಕಾತಿಗಳನ್ನು ಮಾತ್ರ ಸಹಾಯಾನುದಾನದ ಉದ್ದೇಶಕ್ಕಾಗಿ ಪರಿಗಣಿಸತಕ್ಕದ್ದು. ಪ್ರತಿಯೊಂದು ತರಗತಿಯಲ್ಲಿ ನಿಗದಿತ ಕನಿಷ್ಠ ಮಟ್ಟದ ವಿದ್ಯಾರ್ಥಿ ದಾಖಲಾತಿ ಮತ್ತು ಹಾಜರಾತಿ ಸಂಖ್ಯಾಬಲವನ್ನು ಹೊಂದಿರತಕ್ಕದ್ದು.

(8) ಖಾಸಗಿ ಶಾಲೆಗಳಲ್ಲಿ ಮತ್ತು ಪದವಿಪೂರ್ವ ಕಾಲೇಜುಗಳಲ್ಲಿ ನೇಮಕವಾದ ಶಿಕ್ಷಕರು ಮತ್ತು ಇತರೆ ಸಿಬ್ಬಂದಿ, ಸರ್ಕಾರಿ ಶಾಲೆಗಳಲ್ಲಿನ ಮತ್ತು ಪದವಿಪೂರ್ವ ಕಾಲೇಜುಗಳಲ್ಲಿನ ತತ್ಸಂಬಂಧ ಹುದ್ದೆಗಳಿಗೆ ನಿಗದಿಪಡಿಸಿರುವ ನೇಮಕಾತಿಗಾಗಿ ವಿದ್ಯಾರ್ಹತೆ ಮತ್ತು ಇತರೆ ನಿಗದಿತ ಅರ್ಹತೆಗಳನ್ನು ಅವರ ನೇಮಕಾತಿಯ ಸಮಯದಲ್ಲಿ ಕಡ್ಡಾಯವಾಗಿ ಹೊಂದಿರತಕ್ಕದ್ದು;

(9) ನಿಗದಿತ ಸಿಬ್ಬಂದಿ ಮಾದರಿ ಮತ್ತು ನೇಮಕಾತಿ ಕಾರ್ಯವಿಧಾನದನ್ವಯ ನೇಮಕಾತಿಗಳಾಗಿರಬೇಕು. ಸರ್ಕಾರದ ಮೀಸಲಾತಿ ಆದೇಶಗಳನ್ವಯ ನೇಮಕಾತಿಯಲ್ಲಿ ಮೀಸಲಾತಿಯನ್ನು ಪಾಲಿಸಿರತಕ್ಕದ್ದು. ಆದಾಗ್ಯೂ ದಿನಾಂಕ 01-06-1992ಕ್ಕೆ ಪೂರ್ವದಲ್ಲಿ ಮಾಡಿಕೊಳ್ಳಲಾದ ನೇಮಕಾತಿಗಳಲ್ಲಿ ಮೀಸಲಾತಿ ಆದೇಶಗಳ ಉಲ್ಲಂಘನೆಯನ್ನು ದಿನಾಂಕ 21-04-1995ರ ಸರ್ಕಾರದ ಆದೇಶ ಸಂಖ್ಯೆ ಇಡಿ 227 ಎಸ್‌ಇಪಿ 94ರನ್ವಯ ಮನ್ನಾ ಮಾಡಲಾಗಿದೆ. ಅದರಿಂದಾಗಿ ದಿ: 1.6.92ರ ಪೂರ್ವದಲ್ಲಿ ನೇಮಕಾತಿ ಮಾಡಲಾಗಿದೆ ಎಂಬುವುದನ್ನು ಖಚಿತಪಡಿಸಿಕೊಳ್ಳಲು ದಿ: 22.1.1996ರ ಸುತ್ತೋಲೆ ಸಂಖ್ಯೆ ಇಡಿ 237 ಟಿಪಿಯು 95ರ ಮೂಲಕ ವಿಧಿಸಿದ ಷರತ್ತುಗಳನ್ನು ಪೂರೈಸಿದ್ದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟಪಂಗಡಗಳಿಗೆ ಸೇರಿದವರಿಗೆ ನೇಮಕಾತಿಗಳಲ್ಲಿ ಆದ ನಷ್ಟವನ್ನು ಬ್ಯಾಕ್‌ಲಾಗ್ ಎಂದು ಪರಿಗಣಿಸಿ ಮುಂದಿನ ನೇಮಕಾತಿಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಅಭ್ಯರ್ಥಿಗಳನ್ನು ನೇಮಿಸಿಕೊಂಡು ಕಡ್ಡಾಯವಾಗಿ ಅವರ ಪ್ರಾತಿನಿಧ್ಯತೆಯನ್ನು ಸರಿದೂಗಿಸಿಕೊಳ್ಳತಕ್ಕದ್ದೆಂಬ ಷರತ್ತನ್ನು ದಿ: 21.4.1995ರ ಸದರಿ ಆದೇಶದನ್ವಯ ವಿಧಿಸಲಾಗಿದೆ. ಆದರೆ, ದಿನಾಂಕ 20-06-1995ರ ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 8 ಸೆಹಿಮ 95ರ ಕಂಡಿಕೆ-12(iii)ರನ್ವಯ ಅಲ್ಪಸಂಖ್ಯಾತವೆಂದು ಘೋಷಿಸಲ್ಪಟ್ಟ ಶಾಲೆಗಳಿಗೆ ಸಂಬಂಧಿಸಿದಂತೆ ನೇಮಕಾತಿಯಲ್ಲಿ ಮೀಸಲಾತಿ ಅನ್ವಯಿಸುವುದಿಲ್ಲ;

(10) ಈ ಸಂಸ್ಥೆಗಳಲ್ಲಿ ಮಾಡಿಕೊಂಡ ನೇಮಕಾತಿಗಳಿಗಾಗಿ ಸಿಬ್ಬಂದಿ ಮಾದರಿಗಿಂತ ಕಡಿಮೆ ಇಲ್ಲದೆ ಮತ್ತು ಅದಕ್ಕಿಂತ ಹೆಚ್ಚಿಲ್ಲದೇ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಯನ್ನು ಪಡೆಯತಕ್ಕದ್ದು. ಸಿಬ್ಬಂದಿ ಮಾದರಿಗಿಂತ ಕಡಿಮೆ ಸಿಬ್ಬಂದಿಯೊಂದಿಗೆ ಶಾಲೆ ಅಥವಾ ಪದವಿ ಪೂರ್ವ ಕಾಲೇಜನಲ್ಲಿ ಸರಿಯಾದ ಶಿಕ್ಷಣ ನೀಡಲು ಸಾಧ್ಯವಿಲ್ಲ. ಇದ್ದರಿಂದ ಸಿಬ್ಬಂದಿ ಮಾದರಿ ಪ್ರಕಾರ ಎಲ್ಲಾ ಅರ್ಹ ಸಿಬ್ಬಂದಿಗಳನ್ನು ಒಟ್ಟಿಗೆ ಅನುಮೋದನೆ ನೀಡಬೇಕು. ಕಂತುಗಳಲ್ಲಿ ಅನುಮೋದನೆ ನೀಡಬಾರದೆಂದು ಸೂಚಿಸಿದೆ. ಒಂದು ವೇಳೆ ಈಗಾಗಲೇ ಸಕ್ಷಮ ಪ್ರಾಧಿಕಾರದಿಂದ ನೇಮಕಾತಿ ಅನುಮೋದನೆಯಾಗದಿದ್ದಲ್ಲಿ ಸದರಿ ನೇಮಕಾತಿಗಳಿಗೆ ಈ ಕೆಳಗಿನ ಉಪಕಂಡಿಕೆ (15) ರಲ್ಲಿ ಉಲ್ಲೇಖಿಸಲಾದ ಜಿಲ್ಲಾ ಮಟ್ಟದ ಪರಿಶೀಲನಾ ಸಮಿತಿಯ ಮುಂದಿಟ್ಟು ಅದಕ್ಕೆ ಅದರ ಅನುಮೋದನೆಯನ್ನು ಈಗ ಪಡೆದು, ತದನಂತರ ನೇಮಕಾತಿ ಅನುಮೋದನಾ ಆದೇಶವನ್ನು ಹೊರಡಿಸತಕ್ಕದ್ದು;

(11) ಜಿಲ್ಲಾ ಪರಿಶೀಲನಾ ಸಮಿತಿಯು ಸಹಾಯಾನುದಾನಕ್ಕೆ ಒಳಪಡಿಸಲು ಪ್ರಸ್ತಾವನೆ ಸಲ್ಲಿಸುವಾಗ ಸಿಬ್ಬಂದಿ ಮಾದರಿ ಅನ್ವಯ ಪೂರ್ಣ ಸಂಖ್ಯೆಯ ಸಿಬ್ಬಂದಿಯನ್ನು ನೇಮಕ ಮಾಡಿದಲ್ಲಿ ಮಾತ್ರ ಅಂತಹ

ಪ್ರಕರಣಗಳನ್ನು ಅನುಮೋದಿಸಲು ಪರಿಗಣಿಸತಕ್ಕದ್ದು. ತುಂಡು (Piecemeal) ಆಧಾರದ ಮೇಲೆ ಹಂತ ಹಂತವಾಗಿ ಅನುಮೋದಿಸಬಾರದು ಮತ್ತು ಪ್ರಸ್ತಾವನೆ ಕಳುಹಿಸಬಾರದು. ಆದಾಗ್ಯೂ, "ಡಿ" ಗುಂಪಿನ ನೌಕರರ ನೇಮಕಾತಿಗೆ ಸಂಬಂಧಿಸಿದಂತೆ ಸರ್ಕಾರದ ಮಿತವ್ಯಯ ಆದೇಶಗಳಿರುವುದರಿಂದ ಮಿತವ್ಯಯ ಆದೇಶಗಳನ್ನು ಸಡಿಲಿಸುವವರೆಗೆ "ಡಿ" ಗುಂಪು ನೌಕರರ ನೇಮಕಾತಿಯನ್ನು ಅನುಮೋದಿಸಬಾರದು ಹಾಗೂ ಪ್ರಸ್ತಾವನೆ ಸಲ್ಲಿಸಬಾರದು. ನಿಗದಿತ ಸಿಬ್ಬಂದಿ ಮಾದರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಅನುಮೋದನೆ ನೀಡಿದಲ್ಲಿ, ಅಂತಹವರು ಮುಂದೆ ನ್ಯಾಯಾಲಯದ ಮೊರೆ ಹೋಗುವ ಸಾಧ್ಯತೆ ಇರುವುದರಿಂದ ಸಿಬ್ಬಂದಿ ಮಾದರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಅನುಮೋದಿಸಬಾರದು.

(12) ಆಡಳಿತ ಮಂಡಳಿಗೆ ಸಂಬಂಧಿಸಿದಂತೆ ಯಾವುದೇ ವ್ಯಾಜ್ಯ ಇರತಕ್ಕದ್ದಲ್ಲ. ಒಂದು ವೇಳೆ ಅಂತಹ ವ್ಯಾಜ್ಯ ಇದ್ದಲ್ಲಿ, ಅಂತಹ ಶಾಲೆಯ/ಪದವಿಪೂರ್ವ ಕಾಲೇಜಿನ ನೌಕರರು ಸಹಾಯಮದಾನಕ್ಕೆ ಅರ್ಹತೆ ಪಡೆಯುವುದಿಲ್ಲ;

(13) ಸಂಬಂಧಿಸಿದ ಶಾಲೆಯ/ ಕಾಲೇಜಿನ, ಎಸ್.ಎಸ್.ಎಲ್.ಸಿ./ಪಿ.ಯು.ಸಿ. ಪರೀಕ್ಷೆಯಲ್ಲಿನ ಫಲಿತಾಂಶವು ಕಳೆದ 05 ವರ್ಷಗಳಲ್ಲಿನ ಸಂಬಂಧಿಸಿದ ಜಿಲ್ಲೆಯ ಸರಾಸರಿ ಫಲಿತಾಂಶಕ್ಕೆ ಕಡಿಮೆ ಇರತಕ್ಕದ್ದಲ್ಲ. ಅದೇ ರೀತಿ, ಸಂಬಂಧಿಸಿದ ಖಾಸಗಿ ಪದವಿಪೂರ್ವ ಕಾಲೇಜಿನ, ದ್ವಿತೀಯ ವರ್ಷದ ಪಿ.ಯು.ಸಿ. ಪರೀಕ್ಷೆಯಲ್ಲಿನ ಫಲಿತಾಂಶವು ಕಳೆದ 05 ವರ್ಷಗಳಲ್ಲಿನ ಸಂಬಂಧಿಸಿದ ಜಿಲ್ಲೆಯ ಸರಾಸರಿ ಫಲಿತಾಂಶಕ್ಕೆ ಕಡಿಮೆ ಇರತಕ್ಕದ್ದಲ್ಲ.

(14) ಕರ್ನಾಟಕ ಸಂಘಗಳ ನೋಂದಣಿ ನಿಯಮಾವಳಿಯಲ್ಲಿ ನಮೂದಿಸಿರುವ ಅವಕಾಶಗಳ ಪ್ರಕಾರ ಪ್ರತಿ ವರ್ಷ ಆಡಿಟ್ ನಡೆಸಿ ವರದಿಯನ್ನು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಬೇಕು ಹಾಗೂ ಸಂಬಂಧಿಸಿದ ಆಯುಕ್ತರಿಗೆ ಮಾಹಿತಿಗಾಗಿ ಪಿ.ಟಿ.ಆರ್. ಮತ್ತು ಸಂಘದ ಕಾರ್ಯಕಾರಿ ಸದಸ್ಯರ ಅಧಿಕೃತ ಪಟ್ಟಿಯನ್ನು ಸಲ್ಲಿಸತಕ್ಕದ್ದು (ಸಕ್ಷಮ ಪ್ರಾಧಿಕಾರದಿಂದ ದೃಢೀಕರಿಸಲ್ಪಟ್ಟಿರಬೇಕು);

(15) (ಅ) ಸಹಾಯಾನುದಾನ ಕೋರುವ ಖಾಸಗಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳು ಸಹಾಯಾನುದಾನ ಪಡೆಯಲು ಅರ್ಹತೆ ಹೊಂದಿದೆಯೇ? ಅಥವಾ ಇಲ್ಲವೇ? ಹಾಗೂ ಅದರಲ್ಲಿನ ನೇಮಕಾತಿಗಳನ್ನು ನಿಗದಿತ ಕಾರ್ಯ ವಿಧಾನದ ಪ್ರಕಾರ/ ನಿಯಮಗಳನ್ವಯ ಮಾಡಲಾಗಿದೆಯೇ? ಅಥವಾ ಇಲ್ಲವೇ? ಎಂಬ ಬಗ್ಗೆ ಪರಿಶೀಲಿಸಲು ಪ್ರಸ್ತಾವನೆಗಳನ್ನು ಈ ಕೆಳಕಂಡ ಸದಸ್ಯರನ್ನು ಒಳಗೊಂಡ ಜಿಲ್ಲಾ ಪರಿಶೀಲನಾ ಸಮಿತಿಯ ಮುಂದೆ ನಮೂನೆ-3 ರಲ್ಲಿನ ಚೆಕ್‌ಲಿಸ್ಟ್‌ನಲ್ಲಿ ಇಟ್ಟು, ಅದರ ಸ್ಪಷ್ಟ ಅಭಿಪ್ರಾಯ/ಶಿಫಾರಸ್ಸನ್ನು ಪಡೆಯತಕ್ಕದ್ದು:-

| | | | |
|---|---|---|---|
| (i) | ಸಂಬಂಧಿಸಿದ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ | : | ಅಧ್ಯಕ್ಷರು |
| (ii) | ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾ ನೊಂದಣಾಧಿಕಾರಿ | : | ಸದಸ್ಯರು |
| (iii) | ಸಂಬಂಧಿಸಿದ ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು, | : | ಸದಸ್ಯ ಕಾರ್ಯದರ್ಶಿ |

(ಆ) ಅದೇ ರೀತಿ, ಸಹಾಯಾನುದಾನ ಕೋರುವ ಖಾಸಗಿ ಪದವಿ ಪೂರ್ವ ಕಾಲೇಜುಗಳಿಗೆ ಸಂಬಂಧಿಸಿದಂತೆ ಪ್ರಸ್ತಾವನೆಗಳನ್ನು ಈ ಕೆಳಕಂಡ ಸದಸ್ಯರನ್ನು ಒಳಗೊಂಡ ಜಿಲ್ಲಾ ಮಟ್ಟದ ಪರಿಶೀಲನಾ ಸಮಿತಿಯ ಮುಂದೆ ನಿಗದಿತ ಚೆಕ್‌ಲಿಸ್ಟ್‌ನಲ್ಲಿ ಇಟ್ಟು, ಅದರ ಸ್ಪಷ್ಟ ಅಭಿಪ್ರಾಯ/ಶಿಫಾರಸ್ಸು ಪಡೆಯತಕ್ಕದ್ದು:-

(i) ಸಂಬಂಧಿಸಿದ ಜಿಲ್ಲೆಯ ಜಿಲ್ಲಾಧಿಕಾರಿ : ಅಧ್ಯಕ್ಷರು

(ii) ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾ ನೊಂದಣಾಧಿಕಾರಿ : ಸದಸ್ಯರು

(iii) ಸಂಬಂಧಪಟ್ಟ ಜಿಲ್ಲೆಯ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು : ಸದಸ್ಯ ಕಾರ್ಯದರ್ಶಿ

ಈಗಾಗಲೇ, ಮೇಲೆ ಹೇಳಿದಂತೆ, ಸದರಿ ಸಮಿತಿಗಳು ಈ ಕೆಳಕಂಡ ಕಾರ್ಯಗಳನ್ನು ನಿರ್ವಹಿಸತಕ್ಕದ್ದು:-

(ಎ) ಸಹಾಯಾನುದಾನ ಕೋರುವ ಖಾಸಗಿ ಶಾಲೆ / ಪದವಿ ಪೂರ್ವ ಕಾಲೇಜು ಸಹಾಯನುದಾನ ಪಡೆಯಲು ಅರ್ಹತೆ ಹೊಂದಿದೆಯೇ? ಅಥವಾ ಇಲ್ಲವೇ? ಎಂಬ ಬಗ್ಗೆ; ಹಾಗೂ

(ಬಿ) ಅದರಲ್ಲಿನ ನೇಮಕಾತಿಗಳನ್ನು ನಿಗದಿತ ಕಾರ್ಯ ವಿಧಾನದ ಪ್ರಕಾರ /ನಿಯಮಗಳನ್ವಯ ಮಾಡಲಾಗಿದೆಯೇ? ಅಥವಾ ಇಲ್ಲವೇ? ಎಂಬ ಬಗ್ಗೆ ಪರಿಶೀಲಿಸಿ, ತನ್ನ ನಿರ್ದಿಷ್ಟ ಹಾಗೂ ಸ್ಪಷ್ಟ ಅಭಿಪ್ರಾಯ/ಶಿಫಾರಸ್ಸು ನೀಡುವುದು, ಪ್ರತಿಯೊಂದು ನೇಮಕಾತಿಗೆ ಸಂಬಂಧಿಸಿದ ವಿವರಗಳನ್ನು ಈ ಆದೇಶಕ್ಕೆ ಲಗತ್ತಿಸಿದ <u>ನಮೂನೆ-4</u> ರಲ್ಲಿನ ಚೆಕ್‌ಲಿಸ್ಟ್‌ನಲ್ಲಿ ಒದಗಿಸತಕ್ಕದ್ದು ; ಮತ್ತು

(ಸಿ) ಅಗತ್ಯವಿದ್ದಲ್ಲಿ, ಮೇಲಿನ ಉಪ ಕಂಡಿಕೆ (10)ರಲ್ಲಿ ಉಲ್ಲೇಖಿಸಲಾದಂತೆ ನೇಮಕಾತಿಗಳನ್ನು ಅನುಮೋದಿಸುವ ಕಾರ್ಯವನ್ನು ನಿರ್ವಹಿಸುವುದು.

ಈ ಉದ್ದೇಶಕ್ಕಾಗಿ ಖಾಸಗಿ ಪದವಿ ಪೂರ್ವ ಕಾಲೇಜುಗಳಿಗೆ ಸಂಬಂಧಿಸಿದಂತೆ <u>ನಮೂನೆ-5</u> ರಲ್ಲಿನ ಚೆಕ್ ಲಿಸ್ಟ್‌ಗಳನ್ನು ಉಪಯೋಗಿಸತಕ್ಕದ್ದು.

(16) ಅನುದಾನ ರಹಿತ ಶಿಕ್ಷಣ ಸಂಸ್ಥೆಗಳ ನೌಕರರ ಸೇವಾ ಭದ್ರತೆ, ಸೇವಾ ಸೌಲಭ್ಯಗಳು ಇತ್ಯಾದಿಗಳ ಕುರಿತು ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಸಹಾಯಾನುದಾನ ಇಲ್ಲದ ಖಾಸಗಿ ಪ್ರಾಥಮಿಕ, ಪ್ರೌಢ ಮತ್ತು ಪದವಿ ಪೂರ್ವ ಶಿಕ್ಷಣ ಸಂಸ್ಥೆಗಳ ನೌಕರರ ಕೆಲವು ಸೇವಾ ಷರತ್ತು ಮತ್ತು ನಿಬಂಧನೆಗಳು) ನಿಯಮಗಳು, 2005, ಈ ನಿಯಮಗಳನ್ನು ಸರ್ಕಾರ ರಚಿಸಿದ್ದು, ಅವುಗಳನ್ನು ಅನುದಾನ ರಹಿತ ಶಿಕ್ಷಣ ಸಂಸ್ಥೆಗಳು ಕಟ್ಟು ನಿಟ್ಟಾಗಿ ಪಾಲಿಸಬೇಕಾಗಿದೆ. ಇದಲ್ಲದೆ, ಕರ್ನಾಟಕ ಶಿಕ್ಷಣ ಅಧಿನಿಯಮ, 1983ರ ಸೆಕ್ಷನ್ 92ರನ್ವಯ, ಖಾಸಗಿ ಶಿಕ್ಷಣ ಸಂಸ್ಥೆಗಳ ನೌಕರರನ್ನು ಅದರನ್ವಯ ವಿಚಾರಣೆ ನಡೆಸದೇ, ಸೇವೆಯಿಂದ ವಜಾ ಮಾಡಲು ಅಥವಾ ತೆಗೆದುಹಾಕಲು ಬರುವುದಿಲ್ಲ. ಸದರಿ ನಿಯಮಗಳನ್ನು ಅಥವಾ ಅಧಿನಿಯಮದ ಉಪಬಂಧಗಳನ್ನು ಉಲ್ಲಂಘಿಸಿ, ಯಾವುದೇ ಆಡಳಿತ ಮಂಡಳಿ ಅದರ ನೌಕರನ ವಿರುದ್ಧ ಕ್ರಮ ತೆಗೆದುಕೊಂಡಿದ್ದಲ್ಲಿ ಅಥವಾ ಅದರ ನೌಕರರಿಗೆ 2005ರ ಸದರಿ ನಿಯಮಗಳನ್ವಯ ದೊರಕಿಸಬೇಕಾದ, ಸೇವಾ ಸೌಲಭ್ಯಗಳನ್ನು ದೊರಕಿಸದೇ, ಸೇವಾ ಷರತ್ತುಗಳ ಉಲ್ಲಂಘನೆ ಮಾಡಿದ ಖಾಸಗಿ ಶಿಕ್ಷಣ ಸಂಸ್ಥೆ ಸಹಾಯಾನುದಾನಕ್ಕಾಗಿ ಅರ್ಜಿ ಸಲ್ಲಿಸಿದಲ್ಲಿ, ಅದನ್ನು ಆ ಉಲ್ಲಂಘನೆಯ ಕಾರಣಕ್ಕಾಗಿ ತಿರಸ್ಕರಿಸತಕ್ಕದ್ದು. ಅದೇ ರೀತಿ, ಕರ್ನಾಟಕ ಪದವಿ ಪೂರ್ವ ಶಿಕ್ಷಣ (ಶೈಕ್ಷಣಿಕ, ನೋಂದಣಿ, ಆಡಳಿತ ಮತ್ತು ಸಹಾಯನುದಾನ ಇತ್ಯಾದಿ) ನಿಯಮಗಳು, 2006ಅನ್ನು ಅಥವಾ ಅಧಿನಿಯಮವನ್ನು ಉಲ್ಲಂಘಿಸಿ, ಸಂಬಂಧಿಸಿದ ಶಿಕ್ಷಣ ಸಂಸ್ಥೆ ಅದರ ನೌಕರರ ವಿರುದ್ಧ ಕ್ರಮ ತೆಗೆದುಕೊಂಡಿದ್ದಲ್ಲಿ ಅವರಿಗೆ ಆ ನಿಯಮಗಳ ಪ್ರಕಾರ ಅಥವಾ ಇತರೆ ಸಂಬಂಧಿಸಿದ ನಿಯಮಗಳ ಪ್ರಕಾರ ದೊರಕಿಸಬೇಕಾದ ಸೇವಾ ಸೌಲಭ್ಯಗಳನ್ನು ದೊರಕಿಸದೇ, ಸೇವಾ ಷರತ್ತುಗಳ ಉಲ್ಲಂಘನೆ ಮಾಡಿದ ಶಿಕ್ಷಣ ಸಂಸ್ಥೆ ಸಹಾಯಾನುದಾನ ಕೋರಿ ಅರ್ಜಿ ಸಲ್ಲಿಸಿದಲ್ಲಿ, ಆ ಉಲ್ಲಂಘನೆಯ ಕಾರಣಕ್ಕಾಗಿ ಅದನ್ನು ತಿರಸ್ಕರಿಸತಕ್ಕದ್ದು.

5. ಸಹಾಯಾನುದಾನವನ್ನು ಕೋರುವ ಕಾರ್ಯವಿಧಾನ :- ಸಂಬಂಧಿಸಿದ ಆಡಳಿತ ಮಂಡಳಿ, ಸದರಿ 16 ಅಂಶಗಳನ್ನು ಒಳಗೊಂಡ, ಈ ಆದೇಶಕ್ಕೆ ಲಗತ್ತಿಸಿದ ಚೆಕ್‌ಲಿಸ್ಟ್‌ನ ನಮೂನೆಗಳಲ್ಲಿ ಸಹಾಯಾನುದಾನ ಕೋರುವ ಪ್ರಸ್ತಾವನೆಯನ್ನು ಸಂಬಂಧಿಸಿದ ದಾಖಲೆಗಳೊಂದಿಗೆ, ಸಂದರ್ಭಾನುಸಾರ ಸಂಬಂಧಿಸಿದ ಜಿಲ್ಲೆಯ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಅಥವಾ ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಇವರಿಗೆ ಸಲ್ಲಿಸತಕ್ಕದ್ದು. ಪ್ರತಿಯೊಂದು ನೇಮಕಾತಿಗೆ

ಸಂಬಂಧಿಸಿದ ವಿವರಗಳನ್ನು ಈ ಆದೇಶಕ್ಕೆ ಲಗತ್ತಿಸಿದ ಚೆಕ್‌ಲಿಸ್ಟ್‌ನ ನಮೂನೆ-4 ರಲ್ಲಿ ಸಲ್ಲಿಸತಕ್ಕದ್ದು. ಉಪ ನಿರ್ದೇಶಕರು, ಆ ಪ್ರಸ್ತಾವನೆಯನ್ನು ಪರಿಶೀಲಿಸಿ, ಕಂಡಿಕೆ-4ರ ಉಪ ಕಂಡಿಕೆ (15)ರಲ್ಲಿ ಉಲ್ಲೇಖಿಸಲಾದ ಜಿಲ್ಲಾ ಮಟ್ಟದ ಪರಿಶೀಲನಾ ಸಮಿತಿಯ ಮುಂದಿಟ್ಟು, ಸಮಿತಿಯ ಸ್ಪಷ್ಟ ಹಾಗೂ ನಿರ್ದಿಷ್ಟ ಅಭಿಪ್ರಾಯ / ಶಿಫಾರಸ್ಸನ್ನು ಪಡೆದು, ಪ್ರಸ್ತಾವನೆಯನ್ನು ಸ್ವೀಕರಿಸಿದ 30 ದಿನಗಳ ಒಳಗಾಗಿ ಉಪ ನಿರ್ದೇಶಕರು ಅದನ್ನು ಸದರಿ ಚೆಕ್‌ಲಿಸ್ಟ್‌ಗಳಲ್ಲಿಯೇ, ಸಂಬಂಧಿಸಿದ ಆಯುಕ್ತರಿಗೆ ಕಳುಹಿಸತಕ್ಕದ್ದು. ಆಯುಕ್ತರು ಅದನ್ನು ಪರಿಶೀಲಿಸಿ, ಅವರ ಸ್ಪಷ್ಟ ಹಾಗೂ ನಿರ್ದಿಷ್ಟ ಅಭಿಪ್ರಾಯ / ಶಿಫಾರಸ್ಸಿನೊಂದಿಗೆ ಸದರಿ ಚೆಕ್‌ಲಿಸ್ಟ್‌ಗಳ ನಮೂನೆಯಲ್ಲಿಯೇ, ಅದನ್ನು ಸರ್ಕಾರಕ್ಕೆ ಕಳುಹಿಸತಕ್ಕದ್ದು. ಒಂದೊಂದು ಶಾಲಾ ಕಾಲೇಜಿಗೆ ಸಂಬಂಧಿಸಿದ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸುವ ಬದಲು, ಆದಷ್ಟು ಮಟ್ಟಿಗೆ, ಅಂತಹ ಪ್ರಸ್ತಾವನೆಗಳನ್ನು ಒಟ್ಟಾಗಿ, ಸಂಬಂಧಿಸಿದ ಆಯುಕ್ತರು ಸರ್ಕಾರಕ್ಕೆ ಕಳುಹಿಸತಕ್ಕದ್ದು. ಸರ್ಕಾರದ ಹಂತದಲ್ಲಿ ಒಂದೊಂದು ಶಾಲಾ/ಕಾಲೇಜಿಗೆ ಸಂಬಂಧಿಸಿದಂತೆ ಪ್ರತ್ಯೇಕವಾದ ಆದೇಶಗಳನ್ನು ಹೊರಡಿಸುವ ಬದಲು, ಆದಷ್ಟು ಮಟ್ಟಿಗೆ, ಒಟ್ಟಾಗಿ ಸ್ವೀಕರಿಸಲಾದ ಅಂತಹ ಪ್ರಸ್ತಾವನೆಗಳಿಗೆ ಸಂಬಂಧಿಸಿದಂತೆ, ಒಂದೇ ಸರ್ಕಾರಿ ಆದೇಶದನ್ವಯ ಅನುಮೋದನೆಯನ್ನು ನೀಡತಕ್ಕದ್ದು.

6. ದಿ. 1.6.1987ರಿಂದ 1992-93ನೇ ಶೈಕ್ಷಣಿಕ ಸಾಲಿನವರೆಗಿನ ಅವಧಿಯಲ್ಲಿ ಪ್ರಾರಂಭಿಸಿ ಯಾವುದೇ ವಿಚ್ಛಿನ್ನತೆ ಇಲ್ಲದೇ ಸತತವಾಗಿ ಸಾಮಾನ್ಯ ವರ್ಗಕ್ಕೆ ಸೇರಿದ ಆಡಳಿತ ಮಂಡಳಿಗಳ ವತಿಯಿಂದ ನಡೆಸಲಾಗುತ್ತಿರುವ ಖಾಸಗಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳು ಮತ್ತು ಪದವಿ ಪೂರ್ವ ಕಾಲೇಜುಗಳು (ಅಲ್ಪ ಸಂಖ್ಯಾತರ ವರ್ಗಕ್ಕೆ ಸೇರಿದ ಆಡಳಿತ ಮಂಡಳಿಗಳೂ ಒಳಗೊಂಡಂತೆ) ಸಹಾಯಾನುದಾನಕ್ಕೆ ಅರ್ಹವಾಗಲು ಮೇಲಿನ ಕಂಡಿಕೆ 4 ರಲ್ಲಿ ನಮೂದಿಸಲಾದ ಷರತ್ತು ಮತ್ತು ನಿಬಂಧನೆಗಳನ್ನು ಪೂರೈಸತಕ್ಕದ್ದು.

7. ದಿನಾಂಕ 01-06-1987 ರಿಂದ 1992-93ನೇ ಶೈಕ್ಷಣಿಕ ಸಾಲಿನ ಅವಧಿಯಲ್ಲಿ ಪ್ರಾರಂಭಿಸಿ ವಿಚ್ಛಿನ್ನತೆಯಿಲ್ಲದೆ ಸತತವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಆಡಳಿತ ಮಂಡಳಿಗಳ ವತಿಯಿಂದ ನಡೆಸಲಾಗುತ್ತಿರುವ ಖಾಸಗಿ ಪ್ರಾಥಮಿಕ ಶಾಲೆಗಳು ಮತ್ತು ಪ್ರೌಢ ಶಾಲೆಗಳು ಸಹಾಯಾನುದಾನಕ್ಕೆ ಅರ್ಹವಾಗಲು, ಮೇಲೆ (1) ರಲ್ಲಿ ಓದಲಾದ ದಿನಾಂಕ 13-9-2002ರ ಸರ್ಕಾರದ ಆದೇಶ ಸಂಖ್ಯೆ ಇಡಿ 65 ಪಿಜಿಸಿ 95, ಇದನ್ನು ಮೇಲೆ (4) ರಲ್ಲಿ ಓದಲಾದ ದಿನಾಂಕ 20-2-2004ರ ಸುತ್ತೋಲೆ ಸಂಖ್ಯೆ ಇಡಿ 110 ಎಸ್‌ಜಿಸಿ 2003 ರೊಂದಿಗೆ ಓದಿಕೊಂಡಂತೆ, ಇವುಗಳ ಪ್ರಕಾರ ನಿಗದಿಪಡಿಸಲಾದ ಷರತ್ತು ಮತ್ತು ನಿಬಂಧನೆಗಳನ್ನು ಪೂರೈಸತಕ್ಕದ್ದು.

8. ದಿ. 1.6.1987 ರಿಂದ 1992-93ನೇ ಶೈಕ್ಷಣಿಕ ಸಾಲಿನ ಅವಧಿಯಲ್ಲಿ ಪ್ರಾರಂಭಿಸಿ ವಿಚ್ಛಿನ್ನತೆ ಇಲ್ಲದೇ ಸತತವಾಗಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳಿಗೆ ಸೇರಿದ ಆಡಳಿತ ಮಂಡಳಿಗಳ ವತಿಯಿಂದ ನಡೆಸಲಾಗುತ್ತಿರುವ ಖಾಸಗಿ ಪದವಿ ಪೂರ್ವ ಕಾಲೇಜುಗಳು ಸಹಾಯಾನುದಾನಕ್ಕೆ ಅರ್ಹವಾಗಲು ಮೇಲೆ (5) ರಲ್ಲಿ ಓದಲಾದ ದಿ. 7.5.2007ರ ಸರ್ಕಾರಿ ಆದೇಶ ಸಂಖ್ಯೆ ಇಡಿ 63 ಟಿಪಿಯು 2003 ರನ್ವಯ ನಿಗದಿಪಡಿಸಲಾದ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ಪೂರೈಸತಕ್ಕದ್ದು.

9. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಆಡಳಿತ ಮಂಡಳಿಗಳ ವತಿಯಿಂದ ನಡೆಸಲಾಗುತ್ತಿರುವ ಸದರಿ ಖಾಸಗಿ ಪ್ರಾಥಮಿಕ ಶಾಲೆಗಳು, ಪ್ರೌಢಶಾಲೆಗಳು ಮತ್ತು ಪದವಿ ಪೂರ್ವ ಕಾಲೇಜುಗಳನ್ನು ಸಹಾಯಾನುದಾನಕ್ಕೆ ಒಳಪಡಿಸುವ ಪ್ರಸ್ತಾವನೆಗಳನ್ನು ಸಂಬಂಧಿಸಿದ ಸಂಸ್ಥೆಗಳು ಸಲ್ಲಿಸುವ ಸಲುವಾಗಿ ಹಾಗೂ ಅವುಗಳನ್ನು ಪರಿಶೀಲಿಸುವ ಸಲುವಾಗಿ ಈಗಾಗಲೇ ನಿಗದಿಪಡಿಸಲಾದ ಚೆಕ್‌ಲಿಸ್ಟ್‌ಗಳನ್ನೆ ಉಪಯೋಗಿಸತಕ್ಕದ್ದು.

10. ಈ ಆದೇಶವನ್ನು ಆರ್ಥಿಕ ಇಲಾಖೆಯ ದಿ. 25.5.2007 ರ ಟಿಪ್ಪಣಿ ಸಂಖ್ಯೆ ಆಇ 493/ವೆಚ್ಚ-8/2007 ರಲ್ಲಿ ನೀಡಿರುವ ಸಹಮತಿಯಂತೆ ಹಾಗೂ ಯೋಜನಾ ಇಲಾಖೆಯ ದಿ. 31.5.2007ರ ಟಿಪ್ಪಣಿ ಸಂಖ್ಯೆ ಯೋಇ/65/ಜಿಶ/2007ರಲ್ಲಿ ನೀಡಿರುವ ಸಹಮತಿಯಂತೆ ಹೊರಡಿಸಲಾಗಿದೆ.

ಇಡಿ 59 ಪಿಎಂಸಿ 2006

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ. ಹೆಚ್. ವಡಸಲಗಿ
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ